Swabhimani Sahakari, Monthly, Posted at GPO-MBC Bengaluru Post Office 560001,
Posting Day 12th. Registered No. RNP/BGS/2094/2011-13 Licence to post RNI No. KARBIL - 2004/18001



## ಸಂಯುಕ್ತ ಸಹಕಾರಿಯ ನಿರ್ದೇಶಕರ ಪರಿಚಯ
## ಸಾಮಾಜಿಕ ಕಳಕಳಿಯ ಸಹಕಾರಿ
## ಪ್ರಭಾವಿ ಉದ್ಯಮಿ – ಶ್ರೀ ಕೆ. ಸಣ್ಣಸೂಗಪ್ಪ



ಕೊಪ್ಪಳ ಜಿಲ್ಲೆಯ ಗಂಗಾವತಿ ಕರ್ನಾಟಕ ರಾಜ್ಯದ ಅತಿ ಹೆಚ್ಚು ಭತ್ತ ಬೆಳೆಯುವ ಪ್ರದೇಶ. ತುಂಗಾಭದ್ರ ಕಾಲುವೆಗಳಿಂದ ಈ ಭಾಗದ ಜನರಿಗೆ ಭೂಮಿ ನೀರಾವರಿಯಾಗಿ ಉತ್ತಮ ಫಸಲು ಬೆಳೆಯುವ ಅವಕಾಶವನ್ನು ಹೊಂದಿದ ಭಾಗ್ಯವಂತರು ಇಂತಹ ಪ್ರದೇಶದಲ್ಲಿ ಶ್ರೀ ಕೆ.ಸಣ್ಣಸೂಗಪ್ಪನವರು ಕೆ.ಚನ್ನಪ್ಪನವರ ಕುಟುಂಬದಲ್ಲಿ 1953 ನವೆಂಬರ್ 27 ರಂದು ಕಾರಟಗಿಯಲ್ಲಿ ಜನಿಸಿದರು. ಮೂಲತಃ ಕೃಷಿ ಕುಟುಂಬದವರು. ಚಿಕ್ಕಂದಿನಿಂದಲೇ ಸಮಾಜದ ಅಭಿವೃದ್ಧಿಗಾಗಿ ಹೋರಾಟ ಮನೋಭಾವವನ್ನು ಬೆಳೆಸಿಕೊಂಡವರು. ಕೃಷಿಯ ಜೊತೆಗೆ ವಾಣಿಜ್ಯೋದ್ಯಮ ವ್ಯವಹಾರದಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದ್ದಾರೆ. ಹೀಗಾಗಿ ಅನೇಕ ಸಂಘ ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವ ಅವಕಾಶ ಪಡೆಯುವುದರ ಜೊತೆಗೆ ಪ್ರಶಸ್ತಿಗಳು ಇವರನ್ನು ಹುಡುಕಿಕೊಂಡು ಬಂದಿವೆ.

**ಉದ್ದಿಮೆ ಕ್ಷೇತ್ರ** : ಕಾರಟಗಿಯಲ್ಲಿ (ಎಲ್.ವಿ.ಟಿ.) ಲಕ್ಷ್ಮೀವೆಂಕಟೇಶ್ವರ ರೈಸ್ ಮಿಲ್, ಲಕ್ಷ್ಮೀವೆಂಕಟೇಶ್ವರ ಡ್ರೈಯರ್ ಇಂಡಸ್ಟ್ರೀಸ್ ಲಕ್ಷ್ಮೀವೆಂಕಟೇಶ್ವರ ಮಾರ್ಡನ್ ರೈಸ್ ಇಂಡಸ್ಟ್ರೀಸ್, ಪ್ರೈವೆಟ್ ವೇರ್ ಹೌಸಿಂಗ್ ಸರ್ವೀಸಸ್ ಹೀಗೆ ಕೈಗಾರಿಕೆಗಳನ್ನು ನಡೆಸುತ್ತಿದ್ದಾರೆ. ಪ್ರತಿವರ್ಷ ದಾಸೋಹ ವ್ಯವಸ್ಥೆಯನ್ನು ಹೊಂದಿರುವ ಮಠಮಾನ್ಯಗಳಿಗೆ ಸುಮಾರು 50 ರಿಂದ 100 ಕ್ವಿಂಟಲ್‌ಗಳಷ್ಟು ಅಕ್ಕಿಯನ್ನು ದಾನದ ರೂಪದಲ್ಲಿ ಸರಬರಾಜು ಮಾಡುತ್ತಿದ್ದಾರೆ. ಅವುಗಳಲ್ಲಿ ಹುಬ್ಬಳ್ಳಿಯ ಕ್ಯಾನ್ಸರ್ ಆಸ್ಪತ್ರೆ, ಶ್ರೀ ಯಡಯೂರು ಸಿದ್ದಲಿಂಗೇಶ್ವರ ಸಂಸ್ಥೆ, ಶ್ರೀಶೈಲ, ಗದಗ ತೋಟದಾರ್ಯ ಮಠ, ನೊಣವಿನಕೆರೆ ಮಠ,ಹೀಗೆ ಹಲವಾರು ಮಠಗಳಿಗೆ ದಾನವಾಗಿ ಅಕ್ಕಿ ಸರಬರಾಜು ಮಾಡಿ ದಾನಿ ಎನಿಸಿಕೊಂಡಿದ್ದಾರೆ.

**ಶಿಕ್ಷಣ ಕ್ಷೇತ್ರ** : ಶಿಕ್ಷಣ ಕ್ಷೇತ್ರದಲ್ಲಿ ಇವರ ಸೇವೆಯು ಗಣನೀಯವಾದದ್ದು. ಲಕ್ಷ್ಮೀವೆಂಕಟೇಶ್ವರ ಎಜುಕೇಷನ್ ಮತ್ತು ಚಾರಿಯಟೆಬಲ್ ಟ್ರಸ್ಟ್ ಮೂಲಕ ಬಡ ವಿದ್ಯಾರ್ಥಿಗಳಿಗೆ ಶಾಲಾ ಶುಲ್ಕ, ಸಮವಸ್ತ್ರ ಮುಂತಾದವಿಗಳನ್ನು ಒದಗಿಸುತ್ತಿದ್ದಾರೆ. ಸಿಎನ್‌ಎಂ ಕಾಲೇಜಿನಲ್ಲಿ ಸದಸ್ಯರಾಗಿದ್ದಾರೆ. ಎಸ್‌ಎಸ್‌ಬಿ ಎಜುಕೇಷನ್ ಸೊಸೈಟಿಯಲ್ಲಿ ಸೇವೆಸಲ್ಲಿಸಿದ್ದಾರೆ.

**ಸಾಮಾಜಿಕ ಕ್ಷೇತ್ರ** : ಸಾಮಾಜಿಕ ಕ್ಷೇತ್ರದಲ್ಲಿ ಇವರು ಸಲ್ಲಿಸುತ್ತಿರುವ ಸೇವೆ ಗಣನೀಯವಾಗಿದೆ. ಅಖಿಲ ಭಾರತ ವೀರಶೈವ ಮಹಾಸಭಾ ಉತ್ತರ ಕರ್ನಾಟಕ ವಿಭಾಗದ ಅಧ್ಯಕ್ಷರಾಗಿದ್ದಾರೆ, ಲಯನ್ಸ್ ಕ್ಲಬ್ ಕಾರಟಗಿಯಲ್ಲಿ ವಿಭಾಗೀಯಾ ಅಧ್ಯಕ್ಷರಾಗಿ, ತುಂಗಾಭದ್ರ ಅಚ್ಚುಕಟ್ಟು ಪ್ರಾಧಿಕಾರ ಸಮಿತಿಯ ಕೋಶಾಧಿಕಾರಿಯಾಗಿ, ಮಂಡಲ ಪಂಚಾಯತಿ ಕಾರಟಗಿ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ.

**ಸಹಕಾರ ಕ್ಷೇತ್ರ:** ಸಾಮಾಜಿಕ ಅಭಿವೃದ್ಧಿಯು ಕಳಕಳಿಯಿರುವ ಶ್ರೀಯುತರು ಸಹಕಾರ ಕ್ಷೇತ್ರದ ಮೂಲಕ ಹೆಚ್ಚಿನ ಜನರಿಗೆ ಸೇವೆಸಲ್ಲಿಸಿವ ಅವಕಾಶವನ್ನು ಅರಿತುಕೊಂಡು ಸಂಯುಕ್ತ ಸಹಕಾರಿಯ ಮಾಜಿ ಅಧ್ಯಕ್ಷರಾದ ಹಾಗೂ ವಿಧಾನ ಪರಿಷತ್ ಸದಸ್ಯರಾದ ಶ್ರೀ ಮನೋಹರ್ ಮಸ್ಕಿಯವರು ಮೂಲಕ ಪ್ರೇರಿತರಾಗಿ ಲಕ್ಷ್ಮೀವೆಂಕಟೇಶ್ವರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಕಾರಟಗಿ ಇದನ್ನು 2001ರಲ್ಲಿ ಸ್ಥಾಪಿಸಿ, ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಹಾಲಿ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

**ಪಡೆದ ಪ್ರಶಸ್ತಿಗಳು** : ಶ್ರೀಯುತರ ಸೇವೆಯನ್ನು ಪುರಸ್ಕರಿಸಿದ ಸಂಸ್ಥೆಗಳು 2003ರಲ್ಲಿ "ವಿಶ್ವೇಶ್ವರಯ್ಯ ನವರತ್ನ" ಪ್ರಶಸ್ತಿ, 2005ರಲ್ಲಿ "ಆದರ್ಶಕೃಷಿಕ" ಪ್ರಶಸ್ತಿ, 2006ರಲ್ಲಿ "ಶ್ರೀ ಜಗಜ್ಯೋತಿ ಬಸವೇಶ್ವರ ಸದ್ಭಾವನ" ಪ್ರಶಸ್ತಿ ನೀಡಿ ಪುರಸ್ಕರಿಸಿದ್ದಾರೆ.

**ಸೇವಾ ಕ್ಷೇತ್ರ** : ಬೇಸಿಗೆ ದಿನಗಳಲ್ಲಿ ನೀರಿನ ಅರವಟಿಕೆಗಳನ್ನು ಇಡುವುದು ಬಡಮಕ್ಕಳಿಗೆ ಉತ್ತಮ ವ್ಯಾಸಂಗಕ್ಕೆ ಧನಸಹಾಯ ಮಾಡುವುದಲ್ಲದೆ ಬಡ ಜನರಿಗೆ ಕಣ್ಣಿನ ಶಸ್ತ್ರ ಚಿಕಿತ್ಸಾಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಇವರ ವಿಶೇಷ ಸೇವಾ ಕ್ಷೇತ್ರವಾಗಿದೆ.

**ತಪೋವನ** : ಶ್ರೀ ಸಣ್ಣಸೂಗಪ್ಪನವರ ಹಾಗೂ ಅವರ ಕುಟುಂಬ ವರ್ಗದವರು ವಿಶೇಷ ಸಾಧನೆಯಂದರೆ ಕಾರಟಗಿಯಿಂದ ಐದು ಕಿಲೋ ಮೀಟರ್ ದೂರದಲ್ಲಿರುವ 'ತಪೋವನ' ಇದೊಂದು ಆದ್ಯಾತ್ಮಿಕ ಕೇಂದ್ರ ಮಕ್ಕಳಿಗೆ ಹಾಗೂ ಶ್ರೀ ಸಾಮಾನ್ಯರಿಗೆ ಆಧ್ಯಾತ್ಮಿಕ ಪ್ರವೃತ್ತಿಯನ್ನು ಬೆಳೆಸುವ ಕೇಂದ್ರ. 'ವಚನ'ಗಳಿಂದ 'ವ್ಯಕ್ತಿತ್ವ ವಿಕಸನ' ಇದರ ವಿಶೇಷತೆ. ತಪೋವನದಲ್ಲಿ ಹೆಜ್ಜೆ ಹೆಜ್ಜೆಗೂ ವಿವಿಧ ರೀತಿಯಾ ಆರೋಗ್ಯಕರ ಪೂರಕವಾಗುವ ಗಿಡಮೂಲಿಕೆಗಳನ್ನು ಬೆಳೆಸುವುದರ ಜೊತೆಗೆ ಸ್ವಾಭಾವಿಕ ಔಷಧಿಗುಣಗಳನ್ನು ಹೊಂದಿರುವ ಎಲೆಬಳ್ಳಿಗಳನ್ನು, ಗಿಡಮರಗಳನ್ನು ಬೆಳೆಸಿ ಈಪ್ರದೇಶವನ್ನು ನಿರಂತರವಾಗಿ ಹಚ್ಚ ಹಸಿರಾಗಿರುವಂತೆ ಮಾಡಿರುವುದು ಶ್ಲಾಘನೀಯ. ಮೂಲತಹ ಇದೊಂದು ಬರುಡು ಬಂಜರು ಭೂಮಿ ನೀರು ಕಾಣದ ಈ ಭೂಮಿಯಲ್ಲಿ ನಿರಂತರವಾಗಿ ನೀರು ಇರುವಂತೆ ಮಾಡಿ ಈ ಪ್ರದೇಶ ಸದಾ ಹಸಿರಿನ ತವರಾಗಿ ಉಳಿಯುವಂತೆ ಅನೇಕ ಫಲಪುಷ್ಪ ಮಾವು, ತೆಂಗು, ಬಾಳೆ ಮುಂತಾದಗಳನ್ನು ಬೆಳೆಸಿದ್ದಾರೆ. ಜೊತೆಗೆ ಪ್ರಕೃತಿಯ ಮಡಿಲಲ್ಲಿಯ ಮದುವೆಯ ಸವಿ ಸವೆಯಲು ಅವಕಾಶವಾಗುವಂತೆ 'ನಿಸರ್ಗ ಕಲ್ಯಾಣ' ಮಂಟಪವನ್ನೂ ಮಾಡಿದ್ದಾರೆ.



**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತೀಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಕಾನೂನು ವಿಭಾಗದ ಅಧಿಕಾರಿ | ಶ್ರೀ ಶ್ರೀಕಾಂತ | 9916814888 |
| ಬೆಂಗಳೂರು ವಿಭಾಗಾಧಿಕಾರಿ | ಶ್ರೀ ರಘುನಂದನ್ ಕೆ. | 9481036592 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜಿ.ಎಸ್. ಟೋಪಣ್ಣನವರ್ | 9916367887 |
| ಗುಲ್ಬರ್ಗಾ ವಿಭಾಗಾಧಿಕಾರಿ | ಶ್ರೀ ಸಂಜಯ ಕೋರಟಕರ | 9900990268 |
| ಮೈಸೂರು ವಿಭಾಗಾಧಿಕಾರಿ | ಶ್ರೀ ಶಿವಕುಮಾರ ಬಿರಾದಾರ | 9844454995 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ :
ನಂ.436, ಹುಯಿಲುಗೋಳ ಕಾಂಪ್ಲೆಕ್ಸ್, ಶೆರಿಗಲ್ಲಿ, ಬೆಳಗಾವಿ–1. ದೂ. 0831–2401551
ಗುಲ್ಬರ್ಗಾ ವಿಭಾಗೀಯ ಕಛೇರಿಯ ವಿಳಾಸ :
ಡಿ.2, 1ನೇ ಮಹಡಿ, ರತಿ ಬಿಲ್ಡಿಂಗ್, ಖೂಬ ಪ್ಲಾಟ್, ಗುಲ್ಬರ್ಗಾ–2
ದೂ : 08472–227022, ಮೊ : 9900990268

ಇವರಿಂದ ಪ್ರಕಟಿತ : **ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ, (ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ. ಬೆಂಗಳೂರು – 560010.
web : www.souharda.coop, E-mail : souharada@souharada.coop
**ದೂ.ಸಂ** : 23378375/76/77/78/79/80 ಹಾಗೂ 23474408, 23573291
ಸಂಪಾದಕ, ಪ್ರಕಾಶಕ : **ಶರಣಗೌಡ ಜಿ. ಪಾಟೀಲ** । ಸಂಚಿಕೆ ಸಿದ್ಧತೆ : **ವಿ.ಜೆ.ಕಾರಕೂನ**
ಮುದ್ರಣ : ವರ್ಣ ಕಮ್ಯುನಿಕೇಷನ್ಸ್, ಬೆಂಗಳೂರು.

# ಸ್ವಾಭಿಮಾನಿ ಸಹಕಾರಿ

ಅಂತರರಾಷ್ಟ್ರೀಯ ಸಹಕಾರಿ ವರ್ಷ - 2012

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಪುಟ 10 * ಸಂಚಿಕೆ 03 * ಮಾರ್ಚ್ 2012 * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/- * ಬೆಲೆ ರೂ. 5/-






ಮಮತಾ ಪೂಜಾರಿ
ಚೊಚ್ಚಲ
ಮಹಿಳಾ ವಿಶ್ವಕಪ್ ಗೆದ್ದ
ಕಬ್ಬಡಿ ತಂಡದ ನಾಯಕಿ



## ವಿಶ್ವ ಮಹಿಳಾ ದಿನ, ಹೋಳಿ ಮತ್ತು ಯುಗಾದಿ ಹಬ್ಬದ ಶುಭಾಶಯಗಳು

ಅಧ್ಯಕ್ಷರು, ಉಪಾಧ್ಯಕ್ಷರು, ವ್ಯವಸ್ಥಾಪಕ ನಿರ್ದೇಶಕರು ಹಾಗೂ ಆಡಳಿತಮಂಡಳಿ
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,

ಒಳಪುಟಗಳಲ್ಲಿ...


ಅಧ್ಯಕ್ಷರ ನುಡಿ ........ 2
ಅಂತರ ರಾಷ್ಟ್ರೀಯ ಸಹಕಾರ ಸಮ್ಮೇಳನ ........ 3
ಲೇಖನ ........ 4
ಸುತ್ತೋಲೆ ........ 6
ಲೇಖನ ........ 7
ಯುಗಾದಿ ಮತ್ತು ಹೋಳಿ ವಿಶೇಷ ........ 8,9
ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ ........ 10
ಸಂಯುಕ್ತ ಸಹಕಾರಿ ಸಮಾಚಾರಗಳು ........ 11
ಲೇಖನ ........ 12
ಸೌಹಾರ್ದ ಸಹಕಾರಿ ಸಮಾಚಾರಗಳು ........ 13,14
ಸುದ್ದಿ, ಷೇರು - ಚೂರು ಪಾರು ........ 15
ನಿಮಗೆ ಗೊತ್ತೆ, ನಿರ್ದೇಶಕರ ಪರಿಚಯ ........ 16


ಸೌಹಾರ್ದ ಸಹಕಾರಿಗಳ ಸಂಖ್ಯೆ : 1962 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 432



# ಅಂತರ ರಾಷ್ಟ್ರೀಯ ಸಹಕಾರಿ ಸಮ್ಮೇಳನ : ಅರ್ಥಪೂರ್ಣ

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ನೂತನ ಸಂವತ್ಸರ "ನಂದನ" ಹಾಗೂ ಯುಗಾದಿಯ ಹಾರ್ದಿಕ ಶುಭಾಶಯಗಳು. ಯುಗಾದಿಯು **"ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ"** ಎಂಬ ಕವಿವಾಣಿಯಂತೆ ಎಲ್ಲಾ ಸಹಕಾರಿಗಳ ಜೀವನದಲ್ಲಿ, ಸಹಕಾರಿ ಸಂಸ್ಥೆಗಳಲ್ಲಿ ಎಲ್ಲರಿಗೂ ಸುಖ ಶಾಂತಿ ನೆಮ್ಮದಿಯನ್ನು ತರುವಂತಾಗಲಿ ಎಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಪರವಾಗಿ ಹಾರೈಸುತ್ತೇನೆ. ಪ್ರಸಕ್ತ ಆರ್ಥಿಕ ವರ್ಷ ಮುಕ್ತಾಯವಾಗಿ ಹೊಸ ಆರ್ಥಿಕ ವರ್ಷಕ್ಕೆ ಕಾಲಿಡುತ್ತಿದ್ದೇವೆ. ಈ ಪರ್ವ ಕಾಲದಲ್ಲಿ ನಮ್ಮ ಪ್ರಗತಿಯ ಬಗ್ಗೆ ಅವಲೋಕನ ಮಾಡುವುದು ಅಗತ್ಯ. ಈ ಬಗ್ಗೆ ಅಗತ್ಯ ಕ್ರಮವಿಡಲು ಸಿದ್ಧತೆ ಮಾಡಿಕೊಳ್ಳೋಣ.

"ಅಂತರಾಷ್ಟ್ರೀಯ ಸಹಕಾರಿ ವರ್ಷದ ಅಂಗವಾಗಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಾಗಿ ಸಹಕಾರ" ಕುರಿತಾದ ಸಮ್ಮೇಳನವು ದಿನಾಂಕ : 09 ಮತ್ತು 10 ಫೆಬ್ರವರಿಯಲ್ಲಿ ಮಧ್ಯಪ್ರದೇಶದ ಭೂಪಾಲ್‌ನಲ್ಲಿ ನಡೆಯಿತು. ಈ ಸಮ್ಮೇಳನದ ಮುಖ್ಯ ಉದ್ದೇಶ ವಿಶ್ವಶಾಂತಿ. ಸಹಕಾರ ಕ್ಷೇತ್ರದ ಮೂಲಕ ಸಮಾಜದ ಆರ್ಥಿಕ ಸಾಮಾಜಿಕ ಬದಲಾವಣೆಗಾಗಿ ಸ್ವಾಭಾವಿಕ ಸಂಪನ್ಮೂಲಗಳ ಸದ್ಬಳಕೆ ಮಾಡುವುದು ತನ್ಮೂಲಕ ಸಹಕಾರ ಕ್ಷೇತ್ರವನ್ನು ಬಲಪಡಿಸುವುದು ಮತ್ತು ಸಮರ್ಪಕವಾಗಿ ಬಳಸಿಕೊಳ್ಳುವ ಬಗ್ಗೆ ಚಿಂತನೆಯಾಗಿರುವುದು ಒಂದು ಉತ್ತಮ ಬೆಳವಣಿಗೆ. ಸಹಕಾರ ಕ್ಷೇತ್ರದಲ್ಲಿ ಇದರ ಅಗತ್ಯತೆ ಇದೆ. ಆದ್ದರಿಂದ ಇದು ಅರ್ಥಪೂರ್ಣ ಸಮ್ಮೇಳನವೆನ್ನಬಹುದು.

ಭಾರತೀಯ ಸಂಸ್ಕೃತಿ ಅನಾದಿಕಾಲದಿಂದಲೂ ಸಹಕಾರಿ ತತ್ವದ ಮೇಲೆಯೇ ಬೆಳೆದುಬಂದಿದೆ. ಇಡೀ ವಿಶ್ವಕ್ಕೆ ಸಂಸ್ಕೃತಿಯ ಬೆಳಕು ತೋರಿಸಿದ ದೇಶ ನಮ್ಮದು. ಶಾಂತಿ, ಸಹನೆ, ಸಹಬಾಳ್ವೆಯನ್ನು ಬೋಧಿಸಿದ ಹೆಗ್ಗಳಿಕೆ ದೇಶದ್ದು. ಇದೀಗ ಸಾಮಾಜಿಕ ಆರ್ಥಿಕ ಬದಲಾವಣೆಯನ್ನು ಈ ಕ್ಷೇತ್ರದ ಮೂಲಕ ಸಾಧಿಸುವಲ್ಲಿ ಮುಂಚೂಣಿಯಲ್ಲಿರುವ ರಾಷ್ಟ್ರ ನಮ್ಮದು. ಸಹಕಾರ ನಮ್ಮ ದೇಶದಲ್ಲಿ ಜೀವನ ಪದ್ಧತಿಯಾಗಿ ಬೆಳೆದು ಬಂದಿದೆ. ಇಡೀ ಪ್ರಪಂಚದಲ್ಲಿಯೇ ಅತೀ ದೊಡ್ಡದಾದ ಸಹಕಾರಿ ಕ್ಷೇತ್ರ ನಮ್ಮದು. ಅನೇಕ ರೀತಿಯ ಮಾದರಿ ಸಹಕಾರ ಸಂಸ್ಥೆಗಳನ್ನು ಹೊಂದಿದ ದೇಶ ನಮ್ಮದು. ಸಾಧನೆಯು ಸಹ ಅತ್ಯಂತ ದೊಡ್ಡದು. ಈ ದೇಶದ ಸಹಕಾರಿ ಚಳುವಳಿಯ ಪ್ರಗತಿಯನ್ನು ಗಮನಿಸಿದ ವಿಶ್ವ ಸಂಸ್ಥೆಯವರು ಅಂತರ ರಾಷ್ಟ್ರ ಮಟ್ಟದಲ್ಲಿ ಸಹಕಾರ ಕ್ಷೇತ್ರವನ್ನು ಬಲಪಡಿಸುವ ದೃಷ್ಟಿಯಿಂದ ಈ ವರ್ಷವನ್ನು ಅಂತರ ರಾಷ್ಟ್ರೀಯ ವರ್ಷವನ್ನಾಗಿ ಘೋಷಿಸಿರುವುದು ನಮ್ಮ ದೇಶಕ್ಕೆ ನಮ್ಮ ಸಹಕಾರಿ ಕ್ಷೇತ್ರಕ್ಕೆ ಸಲ್ಲಿಸಿದ ಗೌರವವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ವಿಶ್ವ ಸಂಸ್ಥೆಯವರು 2012ನ್ನು ಅಂತರ ರಾಷ್ಟ್ರೀಯ ಸಹಕಾರ ವರ್ಷವನ್ನಾಗಿ ಘೋಷಿಸಿದ ಹಿನ್ನೆಲೆಯಲ್ಲಿ ಸಹಕಾರ ಭಾರತಿ ಹಾಗೂ ಮಧ್ಯಪ್ರದೇಶ ಸರ್ಕಾರ ಜಂಟಿಯಾಗಿ ಹಮ್ಮಿಕೊಂಡಿದ್ದ ಈ ಸಮ್ಮೇಳನ ಪ್ರಸಕ್ತ ಸಾಲಿನ ಪ್ರಪ್ರಥಮ ಅಂತರ ರಾಷ್ಟ್ರೀಯ ಸಮ್ಮೇಳನವಾಗಿದ್ದು, ಅಂತರರಾಷ್ಟ್ರೀಯ ಸಹಕಾರಿ ವರ್ಷವನ್ನಾಗಿ ಆಚರಿಸುತ್ತಿರುವ ಉಳಿದ ಸಂಘ ಸಂಸ್ಥೆಗಳಿಗೆ ಮಾದರಿ ಹಾಗೂ ಪ್ರೋತ್ಸಾಹದಾಯಕವಾಗಿತ್ತು. ಸಮ್ಮೇಳನದಲ್ಲಿ 18 ದೇಶಗಳ ಪ್ರತಿನಿಧಿಗಳು ಹಾಗೂ ನಮ್ಮ ದೇಶದ ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ರಾಜ್ಯ ಮಟ್ಟದ ಸಹಕಾರಿ ಕ್ಷೇತ್ರದ ಅಧ್ಯಕ್ಷರುಗಳು ಭಾಗವಹಿಸಿ ಸಮ್ಮೇಳನವನ್ನು ಯಶಸ್ವಿಯಾಗಿಸುವಲ್ಲಿ ನೀಡಿರುವ ಸಹಕಾರಕ್ಕಾಗಿ ಎಲ್ಲರೂ ಅಭಿನಂದನಾರ್ಹರು.

ಈ ಸಮ್ಮೇಳನದಲ್ಲಿ ಸಹಕಾರಿ ಕ್ಷೇತ್ರದ ಬಲ ಸಂವರ್ಧನೆಗಾಗಿ ಸ್ವಾಭಾವಿಕ ಸಂಪನ್ಮೂಲಗಳನ್ನು ಸದುಪಯೋಗ ಪಡಿಸಿಕೊಳ್ಳುವುದು, ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಈ ಕ್ಷೇತ್ರದ ಲಾಭ ಸುಲಭವಾಗಿ ದೊರಕುವಂತಾಗಬೇಕು ಎಂಬ ಅಭಿಪ್ರಾಯ ವ್ಯಕ್ತವಾಯಿತು.

ಹೊಸ ಕ್ಷೇತ್ರಗಳನ್ನು ಗುರುತಿಸಿ ಕಾರ್ಯ ನಿರ್ವಹಿಸುವಂತಾಗಬೇಕು. ವಿಶೇಷವಾಗಿ ಹಾಲು ಉತ್ಪಾದಕರ ಕ್ಷೇತ್ರ, ಪ್ರವಾಸೋದ್ಯಮ ಕ್ಷೇತ್ರ, ಶಿಕ್ಷಣ, ಆರೋಗ್ಯ, ಆಹಾರಗಳನ್ನು ಸುಲಭವಾಗಿ ಒದಗಿಸಿ ಬಂಡವಾಳಶಾಹಿಯನ್ನು ಸಮರ್ಥವಾಗಿ ಎದುರಿಸಿ ಕಾರ್ಯನಿರ್ವಹಿಸಬೇಕೆಂಬುದೆ ಈ ಸಮ್ಮೇಳನದ ಆಶಯ. ಇದನ್ನು ಸಮರ್ಥವಾಗಿ ಕಾರ್ಯನಿರ್ವಹಿಸಲು ಸಹಕಾರಿಗಳಾದ ನಾವುಗಳೆಲ್ಲ ಕ್ರಿಯಾತ್ಮಕವಾಗಿ, ಸ್ಪಂದಿಸುವುದು ಅಗತ್ಯ. ವಿಶ್ವ ಮಹಿಳಾ ದಿನಾಚರಣೆಯ ಸಂದರ್ಭದಲ್ಲೇ ಕರ್ನಾಟಕದ ಮಮತಾ ಪೂಜಾರಿರವರ ನೇತೃತ್ವದಲ್ಲಿ ಭಾರತದ ಕಬ್ಬಡಿ ತಂಡ ವಿಶ್ವ ಚಾಂಪಿಯನ್ ಆಗಿರುವುದು ನಮಗೆಲ್ಲರಿಗೂ ಹೆಮ್ಮೆಯುಂಟುಮಾಡಿದೆ. ಚೊಚ್ಚಲ ವಿಶ್ವಕಪ್ ಗೆದ್ದ ಮಹಿಳಾ ಕಬ್ಬಡಿ ತಂಡಕ್ಕೆ ಹಾರ್ದಿಕ ಅಭಿನಂದನೆಗಳು.

**ಸಹಕಾರ ನಮ್ಮ ದೇಶದಲ್ಲಿ ಜೀವನ ಪದ್ಧತಿಯಾಗಿ ಬೆಳೆದು ಬಂದಿದೆ. ಇಡೀ ಪ್ರಪಂಚದಲ್ಲಿಯೇ ಅತೀ ದೊಡ್ಡದಾದ ಸಹಕಾರಿ ಕ್ಷೇತ್ರ ನಮ್ಮದು.**

**ಎಸ್.ಆರ್.ಸತೀಶಚಂದ್ರ**
ಅಧ್ಯಕ್ಷರು



# ಸುದ್ದಿ, ಷೇರು, ಚೂರು-ಪಾರು



## ಒ.ಎನ್.ಜಿ.ಸಿ. 'ನವರತ್ನ' ಷೇರು; ಕೊಳ್ಳಲಿಲ್ಲ ಯಾರು

ಕೇಂದ್ರ ಸರ್ಕಾರ ಬಂಡವಾಳ ಹಿಂತೆಗೆತ ಕಾರ್ಯಕ್ರಮದ ಮೂಲಕ 40 ಸಾವಿರ ಕೋಟಿ ರೂ.ಗಳನ್ನು ಸಂಗ್ರಹಿಸಲು ಮುಂದಾಗಿದೆ. ಇದಕ್ಕಾಗಿ ತನ್ನ ಸ್ವಾಮ್ಯದ ನವರತ್ನ ಕಂಪನಿಗಳ ಒಂದಾದ ಒ.ಎನ್.ಜಿ.ಸಿ.ಯ ಷೇರುಗಳನ್ನು ಹರಾಜು ಹಾಕಲು ಮುಂದಾಗಿದೆ. ಇದರ ಮೊದಲ ಹಂತವಾಗಿ ಒಎನ್‌ಜಿಸಿಯ ಶೇ 5 ರಷ್ಟು ಷೇರುಗಳ ಹರಾಜು ಪ್ರಕ್ರಿಯೆ ನಡೆಯಿತು. ಪ್ರತಿ ಷೇರಿನ ಕನಿಷ್ಠ ಬೆಲೆ ರೂ. 290 ರಂತೆ ನಿಗದಿಗೊಳಿಸಿ ರೂ. 42.77 ಕೋಟಿ ಸಂಗ್ರಹಿಸುವ ಗುರಿ ಹೊಂದಿದರೂ ಸಂಗ್ರಹವಾಗಿದ್ದು ರೂ. 12.666 ಕೋಟಿ ಮಾತ್ರ.

ಈ ರೀತಿ ಗುರಿ ವಿಫಲತೆಗೆ ಕಾರಣ ಪ್ರತಿ ಷೇರಿನ ಕನಿಷ್ಠ ಮೊತ್ತವನ್ನು ಸದ್ಯದ ಮುಖ ಬೆಲೆಗಿಂತ ಶೇ 6 ರಷ್ಟು ಹೆಚ್ಚಿಸಿದ್ದು, ಇದರಿಂದ ಮಾರಾಟ ನಂತರ ಷೇರು ಬೆಲೆ ರೂ. 270 ಕ್ಕಿಂತಲೂ ಕಡಿಮೆಯಾಗಬಹುದೆನ್ನುವ ಹೂಡಿಕೆದಾರರ ಭಯ. ಆದರೂ ಕೇಂದ್ರ ಸರ್ಕಾರ ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದೆ. ಒಎನ್‌ಜಿಸಿ ಷೇರು ವಿಕ್ರಯದ ಮೂಲಕ ರೂ. 12.666 ಕೋಟಿ ಸಂಗ್ರಹವಾಗಿದ್ದು ಇದು ಭಾರಿ ಯಶಸ್ಸು ಎಂದೇ ಬಣ್ಣಿಸಿದೆ.

ಸರ್ಕಾರದ ಈ ಬಣ್ಣನೆ ಸಾಂಸ್ಥಿಕ ಹೂಡಿಕೆ ಸಂಸ್ಥೆಗಳ ಲೇವಡಿಗೆ ಒಳಗಾಗಿದೆ. ಕಾರಣ ಸರ್ಕಾರ ತನ್ನ 'ನವರತ್ನ' ಕಂಪನಿಗಳ ಷೇರುಗಳನ್ನುಕೊಳ್ಳಲು ಸಾಂಸ್ಥಿಕ ಹೂಡಿಕೆದಾರ ಸಂಸ್ಥೆಗಳು ಕಾತುರದಿಂದ ಕಾದಿದೆ ಎಂದೇ ಭಾವಿಸಿತ್ತು. ಆದರೆ ಯಾವುದೇ ಸಂಸ್ಥೆಯೂ ಸರ್ಕಾರದ ಈ 'ನವರತ್ನ' ಷೇರುಗಳನ್ನು ಕೊಳ್ಳಲು ಮುಂದೆ ಬರಲಿಲ್ಲ!. ಕೊನೆ ಗಳಿಗೆಯಲ್ಲಿ ಸರ್ಕಾರ ತನ್ನ ಮುಖಭಂಗ ತಪ್ಪಿಸಿಕೊಳ್ಳುವ ಸಲುವಾಗಿ ಎಲ್‌ಐಸಿಗೆ ಸೂಚನೆ ನೀಡಿ; ಅದು ರೂ. 12.666 ಕೋಟಿ ರೂ. ಮೌಲ್ಯದ ಷೇರುಗಳನ್ನು ಖರೀದಿಸಿ ಸರ್ಕಾರವನ್ನು ಮುಖಭಂಗದಿಂದ ಪಾರು ಮಾಡಿದೆ.

### ಜಿಗಿತದ ಹಾದಿಯಲ್ಲಿ ಚಿನ್ನ



ಭಾರತದಲ್ಲಿನ ಚಿನ್ನದ ಬೇಡಿಕೆ ವರ್ಷದಿಂದ ವರ್ಷಕ್ಕೆ ಏರುತ್ತಲೇ ಇದೆ. ಇದು ಕಳೆದ ವರ್ಷಕ್ಕಿಂತ ಈ ವರ್ಷ ಕೊಂಚ ಹೆಚ್ಚಾಗಬಹುದೆನ್ನುವುದು ವಿಶ್ವ ಸ್ವರ್ಣ ಮಂಡಳಿ - ಡಬ್ಲ್ಯೂಜಿಸಿಯ ಅಭಿಪ್ರಾಯ. ಹೀಗಾಗಿ ಈ ವರ್ಷ ಚಿನ್ನದ ಬೆಲೆ ಏರಿಕೆಯಾಗುವುದು ಖಚಿತವಾದಂತಾಗಿದೆ. ಪೆಟ್ರೋಲಿಯಂ ರಾಷ್ಟ್ರಗಳಲ್ಲಿನ ರಾಜಕೀಯ ಅನಿಶ್ಚಿತತೆಯಿಂದಾಗಿ ಹೂಡಿಕೆದಾರರು ಚಿನ್ನದ ಖರೀದಿಗೆ ಮುಗಿಬೀಳುವ ಸಾಧ್ಯತೆ ಹಿನ್ನೆಲೆಯಲ್ಲಿ ಈಗ 10 ಗ್ರಾಂಗಳಿಗೆ ಇರುವ ರೂ. 29 ಸಾವಿರದ ಸನಿಹದ ಬೆಲೆ ಜಿಗಿಯುವ ಸಾಧ್ಯತೆ ಹೆಚ್ಚಾಗಿದೆ.

### ಮಣಪ್ಪುರಂ ಫೈನಾನ್ಸ್ : ರಿಸರ್ವ್ ಬ್ಯಾಂಕ್ ಎಚ್ಚರಿಕೆ

MANAPPURAM FINANCE Make Life Easy

ಇತ್ತೀಚಿಗೆ ಎಲ್ಲೆಡೆ ತಲೆ ಎತ್ತಿರುವ ಮಣಪ್ಪುರಂ ಫೈನಾನ್ಸ್‌ಗೆ ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸಲು ತಾನು ಯಾವುದೇ ಪರವಾನಗಿ ನೀಡಿಲ್ಲವೆಂದು ಭಾರತೀಯ ರಿಸರ್ವ್ ಬ್ಯಾಂಕ್ ಸ್ಪಷ್ಟ ಪಡಿಸಿದೆ. 1934ರ ಆರ್‌ಬಿಐ ಕಾಯ್ದೆ ಪ್ರಕಾರ ಮಣಪ್ಪುರಂ ಫೈನಾನ್ಸ್‌ಗೆ ಸಾರ್ವಜನಿಕರಿಂದ ಠೇವಣಿ ಸಂಗ್ರಹಿಸುವ ಹಾಗೂ ನವೀಕರಿಸುವ ಅನುಮತಿ ಇಲ್ಲ. ಹಾಗಾಗಿ ಮಣಪ್ಪುರಂ ಫೈನಾನ್ಸ್ ಮತ್ತದರ ಅಂಗಸಂಸ್ಥೆಗಳು ಕಾರ್ಯ ಶಿಕ್ಷಾರ್ಹ ಅಪರಾಧ ಎಂದು ರಿಸರ್ವ್ ಬ್ಯಾಂಕ್ ಎಚ್ಚರಿಕೆ ನೀಡಿದೆ. ಹಾಗೊಂದು ವೇಳೆ ಸಾರ್ವಜನಿಕರು ಈ ಸಂಸ್ಥೆಗಳಲ್ಲಿ ಹೂಡಿಕೆ ಮಾಡಿದಲ್ಲಿ ಅದಕ್ಕೆ ಠೇವಣಿದಾರರೇ ಜವಾಬ್ದಾರರು ಎಂದು ರಿಸರ್ವ್ ಬ್ಯಾಂಕ್ ಮೂಲಗಳು ಎಚ್ಚರಿಸಿದೆ.

### ಆದಾಯ ತೆರಿಗೆ ವಿನಾಯ್ತಿ ಮಿತಿ ಎಷ್ಟಾಗಲಿದೆ?

ಕೇಂದ್ರ ಸರ್ಕಾರ ಮುಂದಿನ ಹಣಕಾಸು ವರ್ಷದಲ್ಲಿ ನೇರ ತೆರಿಗೆ ಸಂಬಂಧಿಸಿದ ಸುಧಾರಣ ಕ್ರಮಗಳಿಗೆ ಸಂಸತ್ತಿನ ಅನುಮೋದನೆಯ ನಿರೀಕ್ಷೆಯಲ್ಲಿದೆ. ಇದು ಸಾಧ್ಯವಾದಲ್ಲಿ ಆದಾಯ ತೆರಿಗೆ ಮಿತಿಯನ್ನು ಈಗಿನ ರೂ. 1.80 ಲಕ್ಷದಿಂದ ರೂ. 3 ಲಕ್ಷಕ್ಕೆ ಹೆಚ್ಚಿಸುವಂತೆ ಸ್ಥಾಯಿ ಸಮಿತಿ ತನ್ನ ಕರಡು ವರದಿಯಲ್ಲಿ ಶಿಫಾರಸ್ಸು ಮಾಡಿದೆ. ಆದರೆ ಸಮಿತಿಯ ಕೆಲ ಸದಸ್ಯರು ಹಣದುಬ್ಬರ ಇಳಿಕೆ ಹಾಗೂ ರೂಪಾಯಿ ಖರೀದಿ ಸಾಮರ್ಥ್ಯ ಕಡಿಮೆಯಾಗಿರುವ ಹಿನ್ನೆಲೆಯಲ್ಲಿ ಗರಿಷ್ಠ ಮಿತಿಯನ್ನು ರೂ. 5ಲಕ್ಷಕ್ಕೆ ಏರಿಸುವಂತೆ ಒತ್ತಾಯಿಸಿದ್ದಾರೆ. ಇದು ಬಹುಜನರ ಆಶಯ ಕೂಡ.

### ಷೇರುಪೇಟೆ ಚೇತರಿಕೆಯತ್ತ

ಕಳೆದ ತಿಂಗಳು ಹಲವು ಏಳು ಬೀಳುಗಳ ನಡುವೆ ಕಳೆದ ವಾರ ಷೇರುಪೇಟೆ ಸೂಚ್ಯಂಕ ಚೇತರಿಕೆ ಕಂಡಿದ್ದು 17636 ಅಂಶಗಳಲ್ಲಿ ನೆಲೆಗೊಂಡಿದೆ. ಇದಕ್ಕೆ ಜಾಗತಿಕ ಷೇರು ಮಾರುಕಟ್ಟೆಯ ಚೇತರಿಕೆ ಒಂದಂಶ ಕಾರಣವಾದರೆ, ಮುಂದಿನ ದಿನಗಳಲ್ಲಿ ಆರ್‌ಬಿಐ ವಿತ್ತೀಯ ಪರಾಮರ್ಶೆ, ಕೇಂದ್ರ ಬಜೆಟ್ ಬಗೆಗಿನ ಆಶಾಭಾವನೆ ಸ್ವಲ್ಪ ಮಟ್ಟಿಗೆ ಏರಿಕೆಗೆ ಕಾರಣವಾಗಲಿದೆ.



# ವಿನೂತನ ಉದ್ದೇಶಗಳತ್ತ ಸಹಕಾರಿಗಳ ಚಿತ್ತ

ಸ್ವಾಭಿಮಾನಿಯಲ್ಲಿ ಪ್ರಕಟವಾದ ಸ್ಪೈಸ್ ರೂಟ್ ಸೌಹಾರ್ದ ಸಹಕಾರಿ ಹಾಗೂ ಸಾಗರದ ಸುವಿಧ ಸೂಪರ್ ಮಾರ್ಕೆಟ್ ಲೇಖನಕ್ಕೆ ಪೂರಕವಾಗಿ ಈ ಲೇಖನ.

ಎಚ್. ಶಿವಕುಮಾರ್
ಚಾರ್ಟೆಡ್ ಅಕೌಂಟೆಂಟ್
shivakumar.h@icai.org

ಕರ್ನಾಟಕ ಸೌಹಾರ್ದ ಸಹಕಾರಿ ನಿಯಮ 2004 ನಮೂನೆ-1 ರ ಪ್ರಕಾರ ಹೊಸ ಸಹಕಾರಗಳು ನೊಂದಣಿಗಾಗಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂನೆ-01ರ ಕ್ರಮ ಸಂಖ್ಯೆ (5) ಪ್ರಕಾರ ಉದ್ದೇಶಿತ ಸಹಕಾರಿಯ ಮುಖ್ಯ ಉದ್ದೇಶಗಳನ್ನು ಅರ್ಜಿಯಲ್ಲಿ ವಿವರವಾಗಿ ನಮೂದಿಸಬೇಕಾಗುತ್ತದೆ. ಉದ್ದೇಶಿತ ಸಹಕಾರಿಯ ಉದ್ದೇಶಗಳು ಕಾನೂನು ಸಮ್ಮತವಾಗಿದ್ದಲ್ಲಿ ಅರ್ಜಿ ಸ್ವೀಕೃತವಾಗುತ್ತದೆ. ಅಂದರೆ ಮೇಲ್ನೋಟದಲ್ಲಿ ಸಹಕಾರಿ ಉದ್ದೇಶಗಳು ಸಹಕಾರಿ ತತ್ವಗಳಿಗೆ ವಿರುದ್ಧವಾಗಿ ಕಾನೂನು ಬಾಹಿರವಾಗಿದ್ದಲ್ಲಿ ಸಹಕಾರಿ ಸಂಸ್ಥೆಯನ್ನು ಸ್ಥಾಪಿಸಲು ಸಾಧ್ಯವಾಗುವುದಿಲ್ಲ.

ಪರಿಸ್ಥಿತಿ ಹೀಗಿರುವಾಗ ಉದ್ದೇಶಿತ ಸಹಕಾರಿಯ ಮುಖ್ಯ ಉದ್ದೇಶಗಳು ಹೀಗಿರಬೇಕು ಅಥವಾ ಹೀಗಿರಬಾರದು ಎಂದು ಕಾನೂನು ರೀತ್ಯ ಸ್ಪಷ್ಟಪಡಿಸಲಾಗಿದೆಯೇ ಎಂಬ ಪ್ರಶ್ನೆ ಉದ್ಭವಿಸಬಹುದು. ಉದ್ದೇಶಿತ ಸಹಕಾರಿಯು ಇಂತಹುದೆ ಉದ್ದೇಶಗಳಿಗಾಗಿ ಇರತಕ್ಕದ್ದು, ಅಥವಾ ಇರಬಾರದು ಎಂಬ ಸಿದ್ಧಪಡಿಸಿದ ಪಟ್ಟಿ ಕಾನುನಿನಡಿ ದೊರೆಯುವುದಿಲ್ಲ. ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1977ರ ಅಡಿಯಲ್ಲಿ ನೋಂದಣಿಯಾದ ಸಹಕಾರಿಗಳು ಸಾಧ್ಯವಾದಷ್ಟು ಮಟ್ಟಿಗೆ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆಯತಕ್ಕದ್ದು ಎಂದು ಮಾತ್ರ ಹೇಳಲಾಗಿದೆ (ಅಧಿನಿಯಮ 67).

ಯಾವುದೇ ಸೌಹಾರ್ದ ಸಹಕಾರಿಯು ಹೊಸದಾಗಿ ನೋಂದಣಿಯಾಗುವಾಗ ತನ್ನದೇ ಆದ ಉದ್ದೇಶಗಳನ್ನು ರೂಪಿಸಿಕೊಂಡಿರುತ್ತದೆ. ನಮೂನೆ-1 ಕ್ರಮ ಸಂಖ್ಯೆ (12)ರ ಪ್ರಕಾರ ಉದ್ದೇಶಿತ ಸಹಕಾರಿಯ ಆರ್ಥಿಕ ಸದೃಢತೆ ಮತ್ತು ತಾಂತ್ರಿಕತೆ ಸಾಧ್ಯತೆಗಳಿಂದ ನಡೆಸುವ ಬಗ್ಗೆ ಪ್ರಾಜೆಕ್ಟ್ ವರದಿಯನ್ನು ಲಗತ್ತಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಯೊಂದು ನಡೆಸಬಹುದಾದ ಕಾರ್ಯಚಟುವಟಿಕೆಗಳ ಸ್ವರೂಪ ಹೇಗಿರಬಹುದು ಎಂದು ಚಿಂತಿಸಬೇಕಿದೆ.

ಸೌಹಾರ್ದ ಸಹಕಾರಿಯನ್ನು ಸಾಮಾನ್ಯವಾಗಿ ಹಣಕಾಸು ವ್ಯವಹಾರಕ್ಕಾಗಿ, ಬಳಕೆದಾರರ ಗ್ರಾಹಕ ಸೌಲಭ್ಯಕ್ಕಾಗಿ ಸ್ಥಾಪಿಸಲಾಗುತ್ತದೆ. ಸೌಹಾರ್ದ ಸಹಕಾರಿಯ ಉದ್ದೇಶಗಳನ್ನು ಹೀಗೆ ಸೀಮಿತವಾದ ಚಟುವಟಿಕೆಗಳಿಗೆ ಮೀಸಲಾಗಿರದೆ ಯಾವುದೇ ಬಗೆಯ ಇತರೆ ವ್ಯವಹಾರಿಕವಾದ ಉದ್ದೇಶಗಳಿಗೆ ವಿಸ್ತಾರಗೊಳ್ಳುವ ಅವಕಾಶಗಳಿವೆ. ಅಷ್ಟರಮಟ್ಟಿಗೆ ಸೌಹಾರ್ದ ಸಹಕಾರಿಯ ಉದ್ದೇಶಗಳ ವ್ಯಾಪ್ತಿ ಮುಕ್ತವಾಗಿದೆ. ಈ ದಿಸೆಯಲ್ಲಿ ಸೌಹಾರ್ದ ಸಹಕಾರಿಗಳು ನಡೆಸಬಹುದಾದ ವ್ಯವಹಾರಗಳ ಅರ್ಥವ್ಯಾಪ್ತಿಯನ್ನು ವಿಶ್ಲೇಷಣೆ ಮಾಡಬೇಕಿದೆ.

ಆದಾಯ ತೆರಿಗೆ ಕಾನೂನಿನಲ್ಲಿ ವ್ಯಾಖ್ಯಾನಿಸಿರುವಂತೆ ವ್ಯವಹಾರ ಎಂದರೆ ಯಾವುದೇ ವ್ಯಾಪಾರ, ವಾಣಿಜ್ಯ ಉತ್ಪಾದನೆ ಅಥವಾ ವ್ಯಾಪಾರ, ವಾಣಿಜ್ಯಕ್ಕೆ ಪೂರಕವಾಗಿ ನಡೆಸಬಹುದಾದ ಯಾವುದೇ ಕ್ರಮದಾಯಕ ಕ್ರಿಯೆ. ಹಾಗೆಯೇ ವೃತ್ತಿ ಎಂದರೆ ವೈಯಕ್ತಿಕ ಕೌಶಲ್ಯ, ನೈಪುಣ್ಯತೆಯನ್ನು ಅವಲಂಬಿಸಿ ನಡೆಸಬಹುದಾದ ವ್ಯಾವಹಾರಿಕ ಕ್ರಿಯೆ. ಉದಾಹರಣೆಗೆ ವೈದ್ಯಕೀಯ, ನಟನೆ, ಕಲೆ, ಮುಂತಾದ ವೃತ್ತಿಗಳು. ಎಲ್ಲಾ ವೃತ್ತಿಗಳು ವ್ಯವಹಾರವಾಗಬಲ್ಲವು. ಆದರೆ ಎಲ್ಲಾ ವ್ಯವಹಾರಗಳೂ ವೃತ್ತಿಗಳಾಗುವುದಿಲ್ಲ. ಹಾಗೆಯೇ ವ್ಯಾಪಾರವಾಗಲೀ ಅಥವಾ ವೃತ್ತಿಯಾಗಲೀ ಅದು ವಾಣಿಜ್ಯ ದೃಷ್ಟಿಯಿಂದ ಯಾವಾಗಲೂ ಲಾಭದಾಯಕ ಆಗಿರಲೇಬೇಕು ಎಂಬುದು ಕಡ್ಡಾಯವೇನಲ್ಲ. ಲಾಭದಾಯಕ ದೃಷ್ಟಿಕೋನವಿಲ್ಲದ ಸೇವಾಭಾವ ನಿರತ ಸಂಸ್ಥೆಗಳ ಚಟುವಟಿಕೆಗಳೂ ಸಹ ವ್ಯಾಪಾರೀ ಉದ್ದೇಶವನ್ನು ಹೊಂದಿವೆ ಎಂದು ಪರಿಗಣಿಸಲಾಗುತ್ತದೆ.

ಆದಾಯ ತೆರಿಗೆ ಕಾನೂನಿನ ವ್ಯಾಖ್ಯಾನದ ಹಿನ್ನೆಲೆಯಲ್ಲಿ ಸೌಹಾರ್ದ ಸಹಕಾರಿಗಳ ಉದೇಶಗಳನ್ನು ರೂಪಿಸಬೇಕಾಗುತ್ತದೆ. ಆದರೆ ದುರದೃಷ್ಟವಶಾತ್ ಪ್ರಸ್ತುತದಲ್ಲಿ ಸಹಕಾರಿ ಚಟುವಟಿಕೆ ಎಂದರೆ ಅದು ಬರೀ ಕ್ರೆಡಿಟ್ ಸೊಸೈಟಿ ಅಥವಾ ರೇಷನ್ ಅಂಗಡಿ ಅಥವಾ ಇ-ಸ್ಟಾಂಪಿಂಗ್ ಮಾಡುವುದು ಎಂಬಂತಾಗಿದೆ. ಈ ತರಹದ ಸೀಮಿತ ಅರ್ಥದ ಚಟುವಟಿಕೆಗಳಿಂದ ಹೊರಬಂದು ಹೊಸತನದ ಆರ್ಥಿಕ ಉದ್ದೇಶದ ವ್ಯವಹಾರಿಕ ಕ್ರಿಯೆಗಳಿಗೆ ಸೌಹಾರ್ದ ಸಹಕಾರಿಗಳು ತಮ್ಮನ್ನು ತಾವು ತೆರೆದುಕೊಳ್ಳಬೇಕಿದೆ. ಯಾವುದೇ ಹೊಸ ಚಟುವಟಿಕೆಗಳನ್ನು ಸೌಹಾರ್ದ ಸಹಕಾರಿಗಳು ರೂಪಿಸುವಾಗ ಸಹಕಾರಿ ತತ್ವಗಳಿಗೆ ಅನುಗುಣವಾಗಿ ಆರ್ಥಿಕ ಸದೃಢತೆ ಮತ್ತು ತಾಂತ್ರಿಕ ಸಾಧ್ಯತೆಗಳ ಬಗ್ಗೆ ಪರಾಮರ್ಶಿಸಿ ನಿರ್ಧರಿಸಬೇಕು. ಈ ದಿಸೆಯಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಸಿರಸಿ ತಾಲ್ಲೂಕಿನ ಹುಳಗೋಳದಲ್ಲಿ ಕೆಲವು ಸಹಕಾರಿಗಳು ಪ್ರವಾಸೋದ್ಯಮವನ್ನು ಗ್ರಾಮದತ್ತ ಕೊಂಡೊಯ್ಯುವ ಹೊಸ ಯೋಜನೆಯನ್ನು ತಮ್ಮ ಊರಿನ ಸೌಹಾರ್ದ ಸಹಕಾರಿಯ ಮೂಲಕ ಮಾಡುತ್ತಿರುವುದು ಒಂದು ಉತ್ತಮ ಉದಾಹರಣೆ. ಪ್ರಕೃತಿ ಸೌಂದರ್ಯದಿಂದ ಕೂಡಿರುವ ತಮ್ಮ ಗ್ರಾಮದಲ್ಲಿ ಸಾರ್ವಜನಿಕರು ಈವರೆಗೆ ಗುರುತಿಸದೆ ಇರುವ ಸೃಷ್ಟಿ ಸೌಂದರ್ಯಗಳನ್ನು ಪ್ರವಾಸಿ ತಾಣಗಳನ್ನಾಗಿ ಪರಿಚಯಿಸುವುದು, ಜೊತೆಗೆ ಸ್ಥಳೀಯ ಸಂಸ್ಕೃತಿ, ಕಲೆ, ಹಬ್ಬಗಳನ್ನು ಪ್ರವಾಸಿಗರಿಗೆ ಪರಿಚಯಿಸಿ, ಗ್ರಾಮ ಮಟ್ಟದಲ್ಲಿ ಪ್ರವಾಸೋದ್ಯಮವನ್ನು ವಿಸ್ತರಿಸುವುದು, ಆ ಮೂಲಕ ಗ್ರಾಮವಾಸಿಗಳಿಗೆ ಉದ್ಯೋಗ ಸೃಷ್ಟಿಸಿ ಆರ್ಥಿಕ, ಸಾಮಾಜಿಕ ಅಭಿವೃದ್ಧಿಯ ಪ್ರವರ್ತಕನಂತೆ ಕಾರ್ಯನಿರ್ವಹಿಸುವುದು ಈ ಸಹಕಾರಿಯ ಉದ್ದೇಶ. ಪ್ರವಾಸಿಗಳಿಗೆ ಊಟ, ವಸತಿ ವ್ಯವಸ್ಥೆ, ಗೈಡ್ ವ್ಯವಸ್ಥೆ ಅರಣ್ಯ ನಡಿಗೆ ಮುಂತಾದವು ವಿಶೇಷ ಅಕರ್ಷಣೆಗಳು. ಇದೊಂದು ವಿನೂತನ ಸಹಕಾರಿ ಚಟುವಟಿಕೆ.

ಹಾಗೆಯೇ ಸಾಗರದಲ್ಲಿ ಇತ್ತೀಚಿಗೆ ಸುವಿಧಾ ಸೌಹಾರ್ದ ಸಹಕಾರಿಯಲ್ಲಿ ಸೂಪರ್ ಮಾರ್ಕೆಟ್ ಆರಂಭಿಸಿರುವುದು, ಗುಣಮಟ್ಟದ ಉತ್ಪನ್ನಗಳನ್ನು ಸೂಪರ್ ಮಾರ್ಕೆಟ್ಟಿನಲ್ಲಿ ಮಾರುಕಟ್ಟೆಯಲ್ಲಿರುವ ಗರಿಷ್ಟ ಬೆಲೆಗಿಂದ ಕಡಿಮೆ ದರದಲ್ಲಿ ಮಾರಾಟ ಮಾಡಿ ಆ ಮೂಲಕ ಗ್ರಾಹಕರ ಸೇವೆಯೂ ಲಾಭಮಾರ್ಗಗಳಲ್ಲಿ ಒಂದು ಎಂದು ಉದ್ದೇಶಿಸಿರುವುದು ಕೂಡ ಇನ್ನೊಂದು ಬಗೆಯ ವಿನೂತನ ಸಹಕಾರಿ ಉದ್ದೇಶವೇ. ಸೌಹಾರ್ದ ಸಹಕಾರಿಗಳು ತಮ್ಮ ಹೊಸ ಸಂಸ್ಥೆಯಲ್ಲಿ ನಡೆಸಬಹುದಾದ ವ್ಯವಹಾರಗಳ ಸ್ವರೂಪವನ್ನು ತೀರ್ಮಾನಿಸುವಾಗ ಇಂತಹ ಹೊಸ ಬಗೆಯ ಉದ್ದೇಶಗಳನ್ನು ಗಮನದಲ್ಲಿರಿಸಿಕೊಂಡಿರಬೇಕು. ಅದು ಸಹಕಾರಿ ರಂಗಕ್ಕೆ ವೈವಿಧ್ಯಮಯ ಭವಿಷ್ಯವನ್ನು ಮತ್ತು ಭರವಸೆಯನ್ನು ಒದಗಿಸಬಲ್ಲುದು.

ನಮೂನೆ -1 ರ ಕ್ರಮ ಸಂಖ್ಯೆ ( 12) ಪ್ರಕಾರ ಉದ್ದೇಶಿತ ಸಹಕಾರಿಯ ಆರ್ಥಿಕ ಸದೃಢತೆ ಮತ್ತು ತಾಂತ್ರಿಕ ಸಾಧ್ಯತೆಗಳ ಪರಾಮರ್ಶೆ ಮಾಡಿ ಯೋಜನಾ ವರದಿಯನ್ನು ಸಿದ್ಧಗೊಳಿಸುವಾಗ ಉದ್ದೇಶಗಳ ನಾವಿನ್ಯತೆ, ಅನನ್ಯತೆ ಮತ್ತು ಪ್ರಗತಿಪರ ಧೋರಣೆಯನ್ನು ಅನುಸರಿಸಬೇಕಾಗುತ್ತದೆ. ಸಹಕಾರಿ ತತ್ವಗಳಿಗೆ ಅನುಗುಣವಾಗಿ ಉದ್ದೇಶಗಳನ್ನು ರೂಪಿಸಿ, ಸೇವಾ ಮನೋಭಾವದ ಜೊತೆಯಲ್ಲೇ ಲಾಭದ ಲೆಕ್ಕಾಚಾರವನ್ನು ಆರ್ಥಿಕ ಸದೃಢತೆಯ ದೂರ ದೃಷ್ಟಿಯನ್ನು ಇರಿಸಿ ಕೊಳ್ಳಬೇಕಾಗುತ್ತದೆ.

**ಬೆವಸಾಯವ ಮಾಡಿ ಮನೆಯ ಬೀಯಕ್ಕೆ ಭತ್ತವಿಲ್ಲದಿದ್ದರೆ**
**ಆ ಬೆವಸಾಯದ ಗೊಡವೆಯೇಕಯ್ಯ?**
**ಕ್ರಯವಿಕ್ರಯವ ಮಾಡಿ ಮನೆಯ ಸಂಚು ನಡೆಯದನ್ನಕ್ಕ**
**ಆ ಕ್ರಯವಿಕ್ರಯದ ಗೊಡವೆಯೇಕಯ್ಯ ?**

ಎಂದು ಅಲ್ಲಮ ಪ್ರಭು ತನ್ನ ವಚನವೊಂದರಲ್ಲಿ ಹೇಳಿರುವಂತೆ ಲಾಭ ಮತ್ತು ಸೇವೆಯ ಸಮನ್ವಯದಲ್ಲಿ ಸಹಕಾರಿಯ ವ್ಯಾವಹಾರಿಕ ಉದ್ದೇಶಗಳನ್ನು ರೂಪಿಸಿಕೊಂಡರೆ ಮಾತ್ರ ಪರಿಪೂರ್ಣವಾದ ಸಮಗ್ರ ದೂರದರ್ಶಿತ್ವದ ಸಂಸ್ಥೆಯನ್ನು ಹುಟ್ಟು ಹಾಕಿ ಮುನ್ನಡೆಸಲು ಸಾಧ್ಯವಾಗುತ್ತದೆ. ■

ಮಧ್ಯಪ್ರದೇಶದ ಭೂಪಾಲ್‌ನಲ್ಲಿ 9 ಮತ್ತು 10-02-2012 ರಂದು ನಡೆದ

# ಅಂತರ ರಾಷ್ಟ್ರೀಯ ಸಹಕಾರ ಸಮ್ಮೇಳನ



## ಬಂಡವಾಳಶಾಹಿ ಪೈಪೋಟಿ ಎದುರಿಸಲು ಸಹಕಾರ ಕ್ಷೇತ್ರ ಸಮರ್ಥ – ಶ್ರೀ ಶಿವರಾಜ ಸಿಂಗ್ ಚೌಹಾಣ್, ಮುಖ್ಯಮಂತ್ರಿ, ಮಧ್ಯ ಪ್ರದೇಶ



2012 ಅಂತರ ರಾಷ್ಟ್ರೀಯ ಸಹಕಾರಿ ವರ್ಷವೆಂದು ಘೋಷಣೆಯಾದ ಹಿನ್ನಲೆಯಲ್ಲಿ ಪ್ರಪ್ರಥಮವಾಗಿ ಮಧ್ಯಪ್ರದೇಶದ ಸರ್ಕಾರ ಹಾಗೂ ಸಹಕಾರ ಭಾರತಿ ಜಂಟಿಯಾಗಿ "ಅಂತರ ರಾಷ್ಟ್ರೀಯ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಾಗಿ ಸಹಕಾರ" ಎಂಬ ಶೀರ್ಷಿಕೆಯಲ್ಲಿ ಅಂತರ ರಾಷ್ಟ್ರಮಟ್ಟದ ಸಮ್ಮೇಳನವನ್ನು ಏರ್ಪಡಿಸಲಾಗಿತ್ತು. ಈ ಸಮ್ಮೇಳನದಲ್ಲಿ ವಿಶ್ವದ 18 ರಾಷ್ಟ್ರಗಳ ಪ್ರತಿನಿಧಿಗಳು ನಮ್ಮ ದೇಶದ ವಿವಿಧ ರಾಜ್ಯ ಸರ್ಕಾರಗಳ ಪ್ರತಿನಿಧಿಗಳು ಹಾಗೂ ಸಹಕಾರಿ ಕ್ಷೇತ್ರದ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಸಮ್ಮೇಳನವನ್ನು ಮಧ್ಯಪ್ರದೇಶದ ಸರ್ಕಾರದ ಮುಖ್ಯಮಂತ್ರಿಗಳಾದ ಶ್ರೀ ಶಿವರಾಜ್‌ಸಿಂಗ್ ಚೌಹಾನ್‌ರವರು ಉದ್ಘಾಟಿಸಿ ಸಹಕಾರ ಪ್ರಕೃತಿಯ ಕೊಡುಗೆ. ಸಹಕಾರವಿಲ್ಲದೆ ಪ್ರಪಂಚ ಬದುಕುಳಿಯಲಾರದು. ಮಾನವ ಸಂಘಟನೆಯಾಗಿ ಬದುಕುವುದೇ ಸಹಕಾರದ ದ್ಯೋತಕ. ನಮ್ಮ ಸಂಸ್ಕೃತಿಯಲ್ಲಿ ಸಹಕಾರ ಅನಾದಿಕಾಲದಿಂದಲೂ ಬೆಳೆದುಬಂದಿದೆ. "ಸರ್ವೇ ಜನಾ: ಸುಖಿನೋ ಭವಂತು"! ಎಂಬುದು ನಮ್ಮ ಜೀವನದ ಧ್ಯೇಯವಾಗಿದೆ ಎಂದು ತಿಳಿಸಿದ ಶ್ರೀಯುತರು ಸಹಕಾರ ಒಂದು ಜೀವನಪದ್ಧತಿಯಾಗಿ ಯಶಸ್ವಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಈ ಕ್ಷೇತ್ರದ ಬಲವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯಗಳು ನಡೆಯಬೇಕು ಎಂದು ತಿಳಿಸಿ ಮಧ್ಯಪ್ರದೇಶದ ಸರ್ಕಾರ ರೈತರ ಅಭಿವೃದ್ಧಿಗೋಸ್ಕರ ಹಮ್ಮಿಕೊಂಡಿರುವ ಹಲವಾರು ಯೋಜನೆಗಳ ಬಗ್ಗೆ ವಿವರಣೆ ನೀಡಿದರು.

ಈ ಕ್ಷೇತ್ರವನ್ನು ಬಲಪಡಿಸುವುದಕ್ಕಾಗಿ ಸ್ವಾಭಾವಿಕ ಸಂಪನ್ಮೂಲಗಳ ಸಮರ್ಪಕ ಬಳಕೆಯಾಗುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ತಿಳಿಸಿದರು.

"ಸಹಕಾರದ ನೀತಿಯು ತಮ್ಮ ಸರ್ಕಾರದ ನೀತಿಯಾಗಿದೆ ಎಂದು ತಿಳಿಸಿದರು"

## ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ದೇಶಕ್ಕೇ ಮಾದರಿ – ಶ್ರೀ ಸುರೇಶ್ ಪ್ರಭು

ಮಾಜಿ ಕೇಂದ್ರ ಸಚಿವ ಶ್ರೀ ಸುರೇಶ್ ಪ್ರಭುರವರು ಮಾತನಾಡಿ ಸಹಕಾರಿ ಕೇತ್ರದ ಯಶಸ್ಸು ಅವುಗಳ ನಿರ್ವಹಿಸುವ ಕಾರ್ಯಚಟುವಟಿಕೆಗಳ ಮೇಲೆ ಹಾಗೂ ಅವುಗಳಿಗೆ ಮಾರುಕಟ್ಟೆಯಲ್ಲಿ ಇದರಿಂದ ಪ್ರಭಾವದ ಮೇಲೆ ಅವಲಂಭಿಸುತ್ತದೆ. ಸಹಕಾರಿ ಕ್ಷೇತ್ರವನ್ನು ಪ್ರಭಾವಿ ಕ್ಷೇತ್ರವನ್ನಾಗಿಸುವುದಕ್ಕಾಗಿ ಸಹಕಾರಿಗಳು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಕಾರ್ಯ ನಿರ್ವಹಿಸಬೇಕಾಗುತ್ತದೆ. ಬದಲಾವಣೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹೀಗಾದಲ್ಲಿ ಮಾತ್ರ ಸಹಕಾರಿ ಕ್ಷೇತ್ರವು ಬಂಡವಾಳ ಶಾಹಿಯನ್ನು ಸಮರ್ಥವಾಗಿ ಎದುರಿಸಿ ನಿಲ್ಲಲು ಸಾಧ್ಯವೆಂದು ತಿಳಿಸಿದರು. ಸಹಕಾರಿಗಳು ತಮ್ಮ ಅಳಕನ್ನು ಬಿಟ್ಟು ದುರ್ಬಲತೆಯಿಂದ ಹೊರಬಂದು ಮುನ್ನುಗ್ಗುವ ಸ್ವಭಾವವನ್ನು ಗಳಿಸಿಕೊಂಡು ಮಾರುಕಟ್ಟೆಯಲ್ಲಿ ಪ್ರಭಾವಶಾಲಿಗಳಾಗಿ ಬೆಳೆದಲ್ಲಿ ಮಾತ್ರ ವಿಶ್ವದ ಸಾಮನ್ಯ ಜನರ ಶ್ರೇಯೋಭಿವೃದ್ಧಿಯನ್ನು ಸಾಧಿಸಬಹುದು ಎಂದು ತಿಳಿಸಿ ಲಿಬರಲ್ ಸಹಕಾರಿ ವ್ಯವಸ್ಥೆಯನ್ನು ಜಾರಿಗೊಳಿಸುವುದರಲ್ಲಿ ಕರ್ನಾಟಕದ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆ ದೇಶಕ್ಕೆ ಮಾದರಿಯಾಗಿದೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆಯ ಅನುಷ್ಠಾನವನ್ನು ರಾಜ್ಯದಲ್ಲಿ ಶಾಸನ ಬದ್ಧವಾಗಿ ಸೌಹಾರ್ದ ಸಂಯುಕ್ತ ಸಹಕಾರಿಯನ್ನು ರಚಿಸಿ ಸೌಹಾರ್ದ ಸಹಕಾರಿಗಳ ಕೇಂದ್ರಸಂಸ್ಥೆಯಾಗಿ ಕಾರ್ಯ ನಿರ್ವಹಿಸಲು ಅವಕಾಶಮಾಡಿಕೊಟ್ಟಿರುವುದು ಕಳೆದ ಒಂದು ದಶಕದ ಸಾಧನೆ ಗಮನಾರ್ಹವೆಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಮಧ್ಯಪ್ರದೇಶದಲ್ಲಿ ಸಹಕಾರಿ ಕ್ಷೇತ್ರದ ಮೂಲಕ ರೈತರ ಹಿತಾಸಕ್ತಿ ಕಾಪಾಡುವುದಕ್ಕೆ ಕೈಗೊಂಡಿರು ಕಾರ್ಯಗಳಿಗಾಗಿ  ಮಧ್ಯಪ್ರದೇಶದ ಸರ್ಕಾರದ ಮುಖ್ಯಮಂತ್ರಿ ಶ್ರೀ ಶಿವರಾಜ್ ಸಿಂಗ್ ಚೌಹಾಣ್‌ರವರು ಈ ಕ್ಷೇತ್ರದಲ್ಲಿ ಸ್ಫೂರ್ತಿಯಾಗಿದ್ದಾರೆಂದು ಅವರನ್ನು ಅಭಿನಂದಿಸಿದರು.

ಸಹಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಸತೀಶ್ ಮರಾಠೆಯವರು ಮಾತನಾಡಿ ಸಹಕಾರಿಗಳಿಗೆ ಉತ್ತಮ ಮಾಹಿತಿಯನ್ನು ನೀಡುವುದು ಮತ್ತು ಕೇಂದ್ರ ಸರ್ಕಾರಕ್ಕೆ ಮುಂಬರುವ ಬಜೆಟ್‌ನಲ್ಲಿ ಸಹಕಾರಿ ಕ್ಷೇತ್ರಕ್ಕೆ ಹೆಚ್ಚು ಹಣವನ್ನು ಪೂರೈಸುವ ಬಗ್ಗೆ ವಿನಂತಿಸುವುದು, ಯೋಜನಾ ಆಯೋಗಕ್ಕೆ ಸಹಕಾರ ಕ್ಷೇತ್ರವನ್ನು ಬಲಪಡಿಸುವ ಯೋಜನೆಗಳನ್ನು ಹಾಕಿಕೊಳ್ಳಲು ಪೂರಕವಾಗಿ ನಡವಳಿಕೆಗಳ ಕರಡನ್ನು ಸಿದ್ಧಪಡಿಸುವುದು ಈ ಸಮ್ಮೇಳನದ ಪ್ರಮುಖ ಉದ್ದೇಶವಾಗಿದೆ ಎಂದು ತಿಳಿಸಿದರು.

ಸಮ್ಮೇಳನದಲ್ಲಿ ಮಧ್ಯಪ್ರದೇಶದ ಅಪೆಕ್ಸ್ ಬ್ಯಾಂಕ್‌ನ ಅಧ್ಯಕ್ಷರಾದ ಶ್ರೀ ಭಂವರ್ ಸಿಂಗ್ ಶೇಖಾವತ್, ಸಹಕಾರಿ ಸಚಿವ ಶ್ರೀ ಗೌರಿಶಂಕರ್ ಭೀಮ್‌ಸೇನ್, ಕೃಷಿ ಸಚಿವ ಶ್ರೀ ರಾಮಕೃಷ್ಣ ಕುಸ್ಮಾರ್ಯ, ಕರ್ನಾಟಕದ ಅಪೆಕ್ಸ್ ಬ್ಯಾಂಕ್ ಅಧ್ಯಕ್ಷ ಶ್ರೀ ಆರ್.ಎಂ.ಮಂಜುನಾಥಗೌಡ, ಲ್ಯಾಂಡ್ ಬ್ಯಾಂಕ್ ಅಧ್ಯಕ್ಷ ಶ್ರೀ ಚೊಕ್ಕಬಸವನಗೌಡ, ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶ್ಚಂದ್ರ, ಉಪಾಧ್ಯಕ್ಷರಾದ ಶ್ರೀ ಗುರುನಾಥ ಜ್ಯಾಂತಿಕರ್, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್, ನಿರ್ದೇಶಕರುಗಳಾದ ಶ್ರೀ ಕೃಷ್ಣಾರೆಡ್ಡಿ, ಶ್ರೀ ಕೆ. ಸಣ್ಣಸೂಗಪ್ಪ, ಸಹಕಾರ ಸಂಘಗಳ ಅಪರನಿಬಂಧಕರಾದ ಶ್ರೀ ಹುಚ್ಚಾಚಾರ್, ಜಂಟಿ ನಿಬಂಧಕರುಗಳಾದ ಶ್ರೀ ಕೆ.ಎ.ಕುಮಾರ್, ಶ್ರೀ ಕೆ.ಎಸ್.ನವೀನ್ ಸೇರಿದಂತೆ 700 ಸಹಕಾರಿ ಗಣ್ಯರು ಹಾಗೂ ಅಧಿಕಾರಿಗಳು ವಿದೇಶಿ ಪ್ರತಿನಿಧಿಗಳು ಭಾಗವಹಿಸಿದ್ದರು.







ವಿಶ್ವ ಮಹಿಳಾ ದಿನದ ವಿಶೇಷ ಲೇಖನ

# ಸಹಕಾರಿ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ

ಮಂಜುಳಾ ಆರ್. ಪಾಟೀಲ್



ಸಹಕಾರಿ ಕ್ಷೇತ್ರದಲ್ಲಿರುವ ಎಲ್ಲಾ ಸಹಕಾರಿಗಳಿಗೆ ಯುಗಾದಿ ಹಬ್ಬದ ಶುಭಾಶಯಗಳು,

" ಸಹಕಾರಿ ಕ್ಷೇತ್ರದಲ್ಲಿ ಮಹಿಳೆಯ ಪಾತ್ರ"

ಈ ವಿಷಯದ ಬಗ್ಗೆ ಲೇಖನ ಕೊಡಿ ಎಂದು ಸಂಯುಕ್ತ ಸಹಕಾರಿಯ ಪತ್ರ ನೋಡಿದಾಗ ನನಗೆ ಲೇಖನ ಹೇಗೆ ಕೊಡಬೇಕು ಎಂಬ ಭಾವನೆ ಮೂಡಿತು. ಏಕೆಂದರೆ "ಸಹಕಾರ"ದ ಅರ್ಥವೆ ಮಹಿಳೆ ಎಂದು ನನ್ನ ಭಾವನೆ.

ಮಹಿಳೆ ಹುಟ್ಟಿದಾಗಿನಿಂದಲೂ ಸಹಕಾರಿಯಾಗಿಯೇ ಬರುತ್ತಾಳೆ. ಬಾಲ್ಯವಸ್ಥೆಯಲ್ಲಿ ತಂದೆ–ತಾಯಿಗಳೊಂದಿಗೆ, ಮತ್ತು ಸಹೋದರರೊಂದಿಗೆ ಸಹಕಾರ. ಯೌವನಾವಸ್ಥೆಯಲ್ಲಿ ಗಂಡನೊಂದಿಗೆ ಮತ್ತು ಅವರ ಮನೆಯವರೊಂದಿಗೆ ಸಹಕರಿಸುತ್ತಾ ಮನೆಯನ್ನು ಬೆಳಗುತ್ತಾಳೆ. ವೃದ್ಧಾಪ್ಯದಲ್ಲಿ ಮಕ್ಕಳು, ಮೊಮ್ಮಕ್ಕಳು ಮತ್ತು ಸೊಸೆಯರೊಂದಿಗೆ ಸಹಕರಿಸುತ್ತಾಳೆ. ಹೀಗಾಗಿ ಸಹಕಾರ ಶಬ್ದದ ಅರ್ಥವೇ ಮಹಿಳೆ.

ಒಬ್ಬ ಯಶಸ್ವಿ ಪುರುಷನ ಹಿಂದೆ ಒಬ್ಬ ಮಹಿಳೆ ಇರುತ್ತಾಳೆ ಎಂಬ ಗಾದೆ ಮಾತಿದೆ ಇದರ ಅರ್ಥ ಆ ಪುರುಷನಿಗೆ ಅವಳು ಸಹಕಾರಿಯಾಗಿದ್ದಾಳೆ. ಇದಕ್ಕೆ ಉದಾ: ಬಸವಣ್ಣನವರಿಗೆ ನೀಲಾಂಬಿಕೆ ಮತ್ತು ಗಂಗಾಬಿಕೆ ಎಂದು ಇಬ್ಬರು ಪತ್ನಿಯರಿದ್ದರೂ ಅವರ ಸಹಕಾರದಿಂದ ಬಸವಣ್ಣನವರು ಜಗಜ್ಯೋತಿ ಬಸವಣ್ಣ ಎಂದು ಹೆಸರಾದರು. ಗಾಂಧೀಜಿಗೆ ಕಸ್ತೂರಬಾ ಸಹಕರಿಸಿದ್ದಕ್ಕಾಗಿ ಅವರು ಮಹಾತ್ಮರಾದರು ವೀರ ಸಾವರ್ಕರ್ ಅವರ ಅತ್ತಿಗೆಗೆ ಎಲ್ಲರೊಂದಿಗೆ ಸಹಕರಿಸಿಕೊಂಡು ಹೋಗುವ ಸ್ವಭಾವ ಇದ್ದದ್ದಕ್ಕಾಗಿ ಸಾವರ್ಕರರು ಜೈಲಿನಲ್ಲಿದ್ದಾಗಲೂ ತಮ್ಮ ಹೆಂಡತಿಯ ಬಗ್ಗೆ ಚಿಂತಿಸದೆ ದೇಶದ ಸ್ವಾತಂತ್ರ್ಯಕ್ಕಾಗಿ ಯೋಚಿಸಲು ಅನುಕೂಲವಾಯಿತು. ಹೀಗೆ ಬರೆಯುತ್ತಾ ಹೋದರೆ ಒಂದು ಪುಸ್ತಕವೇ ಆಗುತ್ತದೆ. ಇದು ಸಹಕಾರಿ ಮನೋಭಾವನೆಗೆ ಸಾಕ್ಷಿ.

ಇನ್ನು ಸಹಕಾರಿ ಕ್ಷೇತ್ರಕ್ಕೆ ಬಂದಾಗ, ಉಳಿತಾಯದ ಮನೋ ಭಾವನೆಯಲ್ಲಿ 12ನೇ ಶತಮಾನದಲ್ಲಿ "ಆಯ್ದಕ್ಕಿ ಲಕ್ಕಮ್ಮ" ಎಂಬ ಮಹಿಳೆ, ಮನೆಗಳ ಮುಂದೆ ಬಿಸಾಕಿದ ಕಸದಲ್ಲಿ ಅಕ್ಕಿ ಕಾಳುಗಳನ್ನು ಆರಿಸಿ ತಂದು ಅದರಲ್ಲಿಯೇ ಅನ್ನ ಮಾಡಿ ಕೆಲವರಿಗಾದರೂ ಊಟ ಬಡಿಸುತ್ತಿದ್ದರು. ಅದಕ್ಕಾಗಿ ಅವಳಿಗೆ "ಆಯ್ದಕ್ಕಿ ಲಕ್ಕಮ್ಮ" ಎಂದು ಹೆಸರು ಬಂದಿದೆ. ಅಂದರೆ ಯಾವುದನ್ನು ವ್ಯರ್ಥ ಮಾಡಲೂ ಮಹಿಳೆಯರ ಮನಸ್ಸಿಗೆ ಒಗ್ಗುವುದಿಲ್ಲ. ಲಾಲ್ ಬಹುದ್ದೂರ್ ಶಾಸ್ತ್ರೀ ಪ್ರಧಾನಿಯಾಗಿದ್ದಾಗ ಅವರ ಹೆಂಡತಿಗೆ ತಿಂಗಳಿಗೆ 80 ರೂ. ಕೊಡುತ್ತಿದ್ದರು. ಅದರಲ್ಲಿಯೇ ಅವರು 30 ರೂ. ಉಳಿಸುತ್ತಿದ್ದರು. ಅಂದರೆ ಈಗಿನ ಸಹಕಾರಿ ಕ್ಷೇತ್ರದ ಲೆಕ್ಕಾಚಾರದ ವಿಚಾರ ಮಹಿಳೆಯರಿಗೆ ಅಂದಿನಿಂದಲೆ ಇದೆ.

## ಭಾರತ ಮಹಿಳಾ ಕಬ್ಬಡಿ – ವಿಶ್ವ ಚಾಂಪಿಯನ್



ವಿಶ್ವಕಪ್ ಮಹಿಳಾ ಕಬ್ಬಡಿ ಪಂದ್ಯಾವಳಿಯಲ್ಲಿ ಇರಾನ್ ತಂಡವನ್ನು ಮಣಿಸಿ ಚಾಂಪಿಯನ್ ಆದ ಭಾರತ ತಂಡದ ನಾಯಕಿ ಕರ್ನಾಟಕದ ಮಮತಾ ಪೂಜಾರಿಯವರೊಂದಿಗೆ ತಂಡದ ಆಟಗಾರ್ತಿಯರು.

ಮಹಿಳೆಯರಿಗೆ ಸಹಕಾರಿ ಮನೋಭಾವನೆ ಇದ್ದರೆ ತನ್ನ ಜೊತೆಗಿದ್ದವರನ್ನೂ ಮೇಲ್ಮಟ್ಟಕ್ಕೆ ಕರೆದೊಯ್ಯುವ ಸ್ವಭಾವದವರು. ನಾನು ಸಹಕಾರಿ ಕ್ಷೇತ್ರಕ್ಕೆ ಮೊದಲು ಪಾದಾರ್ಪಣೆ ಮಾಡಿದ್ದು, ರಾಯ ಚೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್‌ನ ನಿರ್ದೇಶಕಿಯಾಗಿ, ಆಗ ನನಗೆ ಬ್ಯಾಂಕ್ ಅಂದರೆ ಏನು ಎಂದು ತಿಳಿದಿರಲಿಲ್ಲ. ಮನೋಹರ ಮಸ್ಕಿ ಅವರು ಸುಕೋ ಬ್ಯಾಂಕ್ ನಿರ್ದೇಶಕರಾದ ಟಿ. ಶಕುಂತಲಾ ಅವರಿಗೆ ನನ್ನನ್ನು ಕರೆದುಕೊಂಡು ಹೋಗಿ ಶೇರ್ ಕಲೆಕ್ಟ್ ಮಾಡಿ ಎಂದು ಹೇಳಿದರು. ಅವರು ನಾನು ಕೂಡಿ ಮನೆ ಮನೆಗೆ ತಿರುಗಾಡಿ 1996ರಲ್ಲಿ 2 ಲಕ್ಷ ರೂ. ಕಲೆಕ್ಟ್ ಮಾಡಿ ಮಹಿಳಾ ಬ್ಯಾಂಕಿಗೆ ನಿರ್ದೇಶಕಳಾದೆ.

ಇದಾದ ನಂತರ ಜನತಾ ಬಜಾರಕ್ಕೆ ಅಧ್ಯಕ್ಷಳಾಗಿ 8 ವರ್ಷ ಸೇವೆ ಸಲ್ಲಿಸಿದೆ. "ಸಹಚರ" ಎಂಬ ಹೆಸರಿನ ಎನ್.ಜಿ.ಓ.ದ ಧರ್ಮದರ್ಶಿಯಾಗಿ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯಲ್ಲಿ 28 ಸಹಕಾರಿಗಳನ್ನು ಹುಟ್ಟು ಹಾಕಿದೆ. ಆಗ ನನಗೆ ಕರ್ನಾಟಕದ ಮಹಿಳೆಯ ಮತ್ತು ಆಂಧ್ರಪ್ರದೇಶದ ಮಹಿಳೆಯರಲ್ಲಿ ಹಣಕಾಸಿನ ವ್ಯತ್ಯಾಸ ಹಾಗೂ ಮನೋಭಾವ ಅರಿಯಲು ವ್ಯತ್ಯಾಸವಾಯಿತು.

ಈ ಸಮಾಜ ಪುರುಷ ಪ್ರಧಾನವಾಗಿದೆ ಆದ್ದರಿಂದ ಸ್ವಾಭಾವಿಕವಾಗಿಯೇ ಸಾಂಸ್ಥಿಕ ಹಾಗೂ ಕೌಟುಂಬಿಕ ವ್ಯವಹಾರವೆಲ್ಲಾ ಗಂಡಸರೇ ನೋಡಿಕೊಳ್ಳುತ್ತಾರೆ. ನಮ್ಮ ಪ್ರದೇಶ ಹಿಂದೆ ನಿಜಾಮರ ಆಳ್ವಿಕೆಯಲ್ಲಿದ್ದ ಕಾರಣ ಹೆಣ್ಣು ಮಕ್ಕಳು ಹೊರಗೆ ಬರುತ್ತಿರಲಿಲ್ಲ. ಆ

## ಸ್ವಾಭಿಮಾನಿ ಪತ್ರಿಕೆಯ ಬಗ್ಗೆ ಅನಿಸಿಕೆಗಳು

### ಹೊಸ ಕ್ಷೇತ್ರಗಳ ಬಗ್ಗೆ ಮಾಹಿತಿಯನ್ನು ಪ್ರಕಟಿಸಿ




"ಪತ್ರಿಕೆ ಸಾಹಿತ್ಯ ಮತ್ತು ಮುದ್ರಣ ಅಂದವಾಗಿ ಬರುತ್ತಿದೆ. ಸಹಕಾರಿಗಳ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ಪ್ರಕಟಿಸುವುದು ಬೇರೆ ಸಹಕಾರಿಗಳಿಗೆ ಪ್ರೋತ್ಸಾಹಿಸಿ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಮತ್ತು ಸಹಕಾರಿಗಳಿಗೆ ಕಾನೂನು ಮತ್ತು ಇತ್ತೀಚಿನ ಬೆಳವಣಿಗೆಗಳ ಬಗ್ಗೆ ತಿಳಿದುಕೊಳ್ಳಲು ಅವಕಾಶವಾಗಿದೆ. ಹೊಸ ಸಹಕಾರಿಗಳನ್ನು ಹುಟ್ಟು ಹಾಕುವ ಬಗ್ಗೆ ಮಾರ್ಗದರ್ಶನಗಳನ್ನು ಹಾಗೂ ಸೌಹಾರ್ದ ಸಹಕಾರಿಗಳು ಕಾರ್ಯ ನಿರ್ವಹಿಸಬಹುದಾದ ಹೊಸ ಕ್ಷೇತ್ರಗಳ ಬಗ್ಗೆ ಮಾಹಿತಿಗಳನ್ನು ಪ್ರಕಟಿಸಿದಲ್ಲಿ ಒಳ್ಳೆಯದಾಗುತ್ತದೆ"

**– ಶ್ರೀಮತಿ ಮಂಜುಳಾ ಪಾಟೀಲ. ಸಿಂಧನೂರ. (ನಿರ್ದೇಶಕರು ಸೌಹಾರ್ದ ಸಂಯುಕ್ತ ಸಹಕಾರಿ ಬೆಂಗಳೂರು)**

### ಬ್ಯಾಂಕಿಂಗ್ ಕುರಿತ ಮಾಹಿತಿ ಸಲಹೆ ಅಗತ್ಯ

"ನಮ್ಮ ಸಹಕಾರಿಗಳ ಸ್ವಾಭಿಮಾನಿ ಸಹಕಾರಿ ಮಾಸಿಕ ಪತ್ರಿಕೆಯು ಅತ್ಯುತ್ತಮವಾಗಿ ಮೂಡಿಬರುತ್ತಿದ್ದು, ಪತ್ರಿಕೆಯು ಕೇವಲ ಕಾರ್ಯಕ್ರಮಗಳ ಫೋಟೊ ಅಥವಾ ವರದಿ ಪ್ರಕಟಣೆಗೆ ಒತ್ತು ನೀಡದೇ ಬ್ಯಾಂಕಿಂಗ್ ಕುರಿತು ಮಾಹಿತಿ, ಸಲಹೆ-ಸೂಚನೆ, ಸಹಕಾರಿ ಸಂಸ್ಥೆಗಳಿಗೆ ಅನ್ವಯವಾಗುವ ಕಾಯ್ದೆಗಳ ಕುರಿತು ಕಾಲಕಾಲಕ್ಕೆ ಮಾಹಿತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಕಟಿಸುವುದರ ಮುಖಾಂತರ ಸಹಕಾರಿ ಪತ್ರಿಕೆಯು ಇನ್ನೂ ಅರ್ಥಪೂರ್ಣವಾಗಿ ಮೂಡಿಬರಲಿ ಎಂದು ಶ್ರೀ ಭ್ರಮರಾಂಬ ಪ.ಸೌ.ಸ.ನಿ.,ಮಸ್ಕಿ. ಪರವಾಗಿ ಹಾರೈಸುವೆವು."

**– ವೀರೇಶ ಹಿರೇಮಠ, .ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಭ್ರಮರಾಂಬ ಸೌಹಾರ್ದ ಪತ್ತಿ ಸಹಕಾರಿ ನಿ.ಮಸ್ಕಿ.**

### ಉತ್ತಮ ಮಾರ್ಗದರ್ಶಿ

"ಸ್ವಾಭಿಮಾನಿ ಸಹಕಾರಿ ಪತ್ರಿಕೆ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಉತ್ತಮ ಮಾರ್ಗದರ್ಶಿಯಂತಿದೆ. ಸಮಗ್ರವಾದ ಮಾಹಿತಿಯನ್ನು ನೀಡುವಲ್ಲಿ ಯಶಸ್ವಿಯಾಗಿದೆ. ಇದರಲ್ಲಿ ಪ್ರಕಟಗೊಳ್ಳುವ ವಿಷಯಗಳು ಕಾರ್ಯದರ್ಶಿಗಳಿಗೆ ಹಾಗೂ ಆಡಳಿತ ಮಂಡಳಿಯವರಿಗೆ ಮಹತ್ವದ ವಿಷಯಗಳನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತಿದೆ. ಇನ್ನೂ ಹೆಚ್ಚಿನ ಮಟ್ಟದಲ್ಲಿ ಎಲ್ಲ ಮಾಹಿತಿಗಳನ್ನು ಅಳವಡಿಸಿ ಸೌಹಾರ್ದ ಸಹಕಾರಿಗಳ ಅಭಿವೃದ್ಧಿಗೆ ಸಹಕಾರಿಯಾಗಿ ಬೆಳೆಯುತ್ತದೆ ಎಂದು ಆಶಿಸುತ್ತೇನೆ."

**– ಶ್ರೀ ಎ.ಕೆ.ದೇಸಾಯಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಬಸವೇಶ್ವರ ಅರ್ಬನ್ ಕ್ರೆ.ಸೌ.ಸ.ಸಂಕೇಶ್ವರ**

### Usefull for the development

''The one and the only media which is very essential and usefull for the development of souhard Cooperative movement.''

- Shri sharan shabareesh souharda sahakari niyamit Gulbarga

**– ಪತ್ರಿಕೆಗೆ ನಿಮ್ಮ ಅನಿಸಿಕೆಗಳನ್ನು ಬರೆದು ಕಳುಹಿಸಿ**

## ಆದಾಯ ತೆರಿಗೆ ಇಲಾಖೆಯಿಂದ ನೋಟೀಸ್ ಬರುವ ಸೌಹಾರ್ದ ಸಹಕಾರಿಗಳಿಗೆ ಸೂಚನೆ

ರಾಜ್ಯದ ಸೌಹಾರ್ದ ಸಹಕಾರಿಗಳಿಗೆ ಆದಾಯ ತೆರಿಗೆ ಅಧಿಕಾರಿಗಳಿಂದ ಆದಾಯ ತೆರಿಗೆ ಪಾವತಿಸಲು ಸೂಚಿಸಿ ನೋಟೀಸ್ ಕೊಡುತ್ತಿರುವುದು ಸಂಯುಕ್ತ ಸಹಕಾರಿಯ ಗಮನಕ್ಕೆ ಬಂದುದೆ. ಈ ರೀತಿ ಆದಾಯ ತೆರಿಗೆ ಇಲಾಖೆಯಿಂದ ನೋಟೀಸ್ ಬಂದ ಕೂಡಲೇ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಿ, ಅದಕ್ಕೆ ಕೈಗೊಳ್ಳಬಹುದಾದ ಕ್ರಮಗಳ ಬಗ್ಗೆ ಸೂಚನೆಯನ್ನು ನೀಡಲಾಗುವುದು. ಆದ್ದರಿಂದ ರಾಜ್ಯದ ಸೌಹಾರ್ದ ಸಹಕಾರಿಗಳು ಆದಾಯ ತೆರಿಗೆ ಇಲಾಖೆಯಿಂದ ಆದಾಯತೆರಿಗೆ ಪಾವತಿಸುವಂತೆ ಸೂಚಿತ ನೋಟೀಸ್‌ಗಳು ಬಂದಾಗ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸಲು ಹಾಗೂ ಒಂದು ಪ್ರತಿಯನ್ನು ಕೇಂದ್ರ ಕಛೇರಿಗೆ ಕಳುಹಿಸಲು ಸೂಚಿಸಿದೆ.

## ಸಹಕಾರ ಭಾರತಿಯ ನೇತೃತ್ವದಲ್ಲಿ ಬೆಂಗಳೂರಿನಲ್ಲಿ 2013 ಜನವರಿಯಲ್ಲಿ ರಾಷ್ಟ್ರ ಮಟ್ಟದ ಸಹಕಾರ ಸಮ್ಮೇಳನ

**– ಶ್ರೀ ಸತೀಶ ಮರಾಠೆ,** ಅಧ್ಯಕ್ಷರು ಸಹಕಾರ ಭಾರತಿ

ಸಹಕಾರ ಭಾರತೀಯ ರಾಷ್ಟ್ರೀಯ ಕಾರ್ಯಕಾರಿಣಿಯು ದಿನಾಂಕ 28/2/2012 ರಂದು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ ಬ್ಯಾಂಕಿನ ಸಭಾಂಗಣದಲ್ಲಿ ನಡೆದು ಸಹಕಾರ ಕ್ಷೇತ್ರದ ಸಮಗ್ರ ಪ್ರಗತಿಯ ಬಗ್ಗೆ ಸಾರ್ವಜನಿಕರ ಹಾಗೂ ಕೇಂದ್ರ ಸರಕಾರಗಳ ಗಮನ ಸೆಳೆದು ಸಹಕಾರ ಕ್ಷೇತ್ರದ ಅಭಿವೃದ್ಧಿಯಲ್ಲಿ ಸರಕಾರ ಹಾಗೂ ಸಾರ್ವಜನಿಕರು ಹೆಚ್ಚಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗುವಂತೆ, ಸಹಕಾರ ಕ್ಷೇತ್ರದ ಸಮಸ್ಯೆಗಳ ಪರಿಹಾರಕ್ಕಾಗಿ ರಾಷ್ಟ್ರೀಯ ಸಮಾವೇಶವನ್ನು ಬರುವ 2013 ಜನವರಿ 18,19,20 ರಂದು ಬೆಂಗಳೂರಿನಲ್ಲಿ ಜರುಗಿಸಲಾಗುವುದೆಂದು ತಿಳಿಸಿದರು.

ತುಮಕೂರು ಅರ್ಬನ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಪ್ರಾರಂಭೋತ್ಸವ

## ಸಹಕಾರ ಸಂಸ್ಥೆಗಳ ಪೈಪೋಟಿ ಎದುರಿಸಲು ಸಶಕ್ತರಾಗಬೇಕು ಡಾ॥ ಶಿವಾನಂದ ಶಿವಾಚಾರ್ಯರು



ಸಹಕಾರ ಸಂಸ್ಥೆಗಳು ಸದಸ್ಯರ ಕಷ್ಟಕಾರ್ಪಣ್ಯಗಳಿಗೆ, ಕಿವಿಗಳಾಗಿ ಸ್ಪಂದಿಸಬೇಕೆಂದು ತುಮಕೂರಿನ ಹಿರೇಮಠದ ಮಠಾಧ್ಯಕ್ಷರಾದ ಡಾ ॥ ಶ್ರೀ ಶ್ರೀ ಶ್ರೀ ಶಿವಾನಂದ ಶಿವಾಚಾರ್ಯರು ಹೇಳಿದ್ದಾರೆ. ಅವರು ತುಮಕೂರಿನ ಬನಶಂಕರಿಯಲ್ಲಿ ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ **ತುಮಕೂರು ಅರ್ಬನ್ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಪ್ರಾರಂಭೋತ್ಸವ** ಸಮಾರಂಭದಲ್ಲಿ ದೀಪ ಬೆಳಗಿಸಿ ಉದ್ಘಾಟನೆಯನ್ನು ಸಿ.ಎಸ್.ಐ. ವೆಸ್ಲಿ ದೇವಾಲಯದ ಕ್ಷೇತ್ರಾಧ್ಯಕ್ಷರಾದ ಘನ ಪಿ.ವಿ.ಜಿ. ಕುಮಾರ್‌ರವರು ನೆರವೇರಿಸಿದರು.

ಅಧ್ಯಕ್ಷತೆವಹಿಸಿ ಮಾತನಾಡಿದ ಡಾನ್ ಬಾಸ್ಕೋ ಶಾಲೆ ಪ್ರಾಂಶುಪಾಲರಾದ ರೇ॥ ಫಾದರ್ ಅರಳಪ್ಪನವರು ಪ್ರಾಮಾಣಿಕತೆ ಮತ್ತು ನಿಷ್ಠೆಯಿಂದಲೇ ಸಹಕರ ಸಂಸ್ಥೆಗಳ ಬೆಳವಣಿಗೆ ಸಾಧ್ಯ. ಈ ದೆಸೆಯಲ್ಲಿ ಉತ್ತಮ ಕಾರ್ಯಕಾರಿ ಮಂಡಳಿಯನ್ನು ಹೊಂದಿರುವ ತುಮಕೂರು ಅರ್ಬನ ವಿವಿಧೋದ್ದೇಶ ಸಹಕಾರಿ ಸದೃಢವಾಗಿ ಬೆಳೆಯಬಲ್ಲುದೆಂದು ಆಶಯ ವ್ಯಕ್ತಪಡಿಸಿದರು.

# ಸಾಲ ಮತ್ತು ಮುಂಗಡಗಳನ್ನು ನೀಡುವ ವಿಧಾನಗಳು



ಸೌಹಾರ್ದ ಸಹಕಾರಿಗಳು ನೀಡುವ ಸಾಲಗಳ ಬಗ್ಗೆ ತಿಳುವಳಿಕೆ ನೀಡುವ ದೃಷ್ಟಿಯಿಂದ ಈ ಲೇಖನ ಪ್ರಕಟಿಸಲಾಗಿದೆ.

**ಜೆ. ಎಸ್. ಟೋಪಣ್ಣವರ,** ವಿಭಾಗೀಯ ಅಧಿಕಾರಿ, ಬೆಳಗಾವಿ.

...ಹಿಂದಿನ ಸಂಚಿಕೆಯಿಂದ

**1) ರಾಷ್ಟ್ರೀಯ ನೀತಿ (National Policy):**

- ಪೇಟೆ ಧಾರಣೆಗಳನ್ನು ನಿಯಂತ್ರಿಸಲು ಹಾಗೂ ರಾಷ್ಟ್ರದ ಆರ್ಥಿಕ ನೀತಿಯನ್ನು ಸಮರ್ಪಕಗೊಳಿಸಲು ಆರ್ಥಿಕ ಸಂಸ್ಥೆಗಳು ಕೊಡುವ ಸಾಲಗಳ ಮೇಲೆ ಭಾರತೀಯ ರಿಜರ್ವ ಬ್ಯಾಂಕಿನವರು ಕೆಲವೊಂದು ನಿರ್ಬಂಧನೆಗಳಿರುವ ವ್ಯವಹಾರಗಳಿಗೆ ಸಾಲಗಳನ್ನು ಕೊಡಕೂಡದು. ಆದರೆ ನಿಬಂಧನೆಯಿದ್ದ ವ್ಯವಹಾರಗಳಿಗೆ ಸಾಲ ಕೊಡಬಹುದಾಗಿದೆ.
- ಸಹಕಾರಿಯು ಸರ್ಕಾರದ ಆರ್ಥಿಕ ನೀತಿಗಳ ಅನುಸಾರ ಅವರು ಉತ್ತೇಜಿಸುತ್ತಿರುವ ಚಟುವಟಿಕೆಗಳಿಗೆ ಆರ್ಥಿಕ ಸಹಾಯ ನೀಡುವುದು ಒಳ್ಳೆಯದು.

**2) ಹಂಚಿಕೆ (Spread) :**

ಜಾಮೀನು ಸಾಲ ಹಾಗೂ ಭದ್ರತೆ ಸಾಲಗಳ ಅನುಪಾತವನ್ನು 3:7 ಇಡುವುದು.

- ಅದರ ಉತ್ತಮ ಸಾಲ ನಿರ್ವಹಣೆ ದೃಷ್ಟಿಯಿಂದ ಒಳಿತು. ಒಂದೆ ಉದ್ದೇಶಕ್ಕೆ, ಒಂದೇ ತರಹದ ಭದ್ರತೆ ಮೇಲೆ, ಒಂದೇ ತರಹದ ವ್ಯವಸಾಯಕ್ಕೆ, ಒಂದೇ ತರನಾದ ಅವಧಿಗಳಗೆ (ಹೆಚ್ಚಿನ ಅವಧಿಗೆ) ಸಾಲ ವಿತರಿಸುವುದು ಸಂಸ್ಥೆಯ ಉತ್ತಮ ಸಾಲ ನಿರ್ವಹಣೆ ದೃಷ್ಟಿಯಿಂದ ಸುರಕ್ಷಿತವಲ್ಲ.
- ಉತ್ಪಾದನೆಗಳನ್ನು ಹೆಚ್ಚಿಸುವ ಉದ್ದೇಶಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲಗಳನ್ನು ಕೊಡುವುದು ಉತ್ತಮ.

**1) ಸಹಕಾರಿಯು ಯಾರಿಗೆ ಸಾಲ ಕೊಡಬೇಕು?**

- ಸಹಕಾರಿಯಲ್ಲಿ ಸದಸ್ಯನಿಗಿರುವ ಹಾಗೂ ಸ್ವತಃ ಸಾಲಕ್ಕೆ ಸುಸ್ಥಿಯಾಗಿರದ ಅಲ್ಲದೇ ಸುಸ್ಥಿದಾರರಿಗೆ ಜಾಮೀನಿರದ ವ್ಯಕ್ತಿಗೆ.
- ಸಹಕಾರಿಯು ನಿಗದಿಪಡಿಸಿದ ಸಾಲದ ಅರ್ಜಿಯ ನಮೂನೆಯಲ್ಲಿ ತಮಗೆ ಬೇಕಾದ ಸಾಲದ ಅರ್ಜಿಯನ್ನು ಎಲ್ಲ ಮಾಹಿತಿಗಳೊಂದಿಗೆ ಹಾಗೂ ಕಾಗದ ಪತ್ರಗಳೊಂದಿಗೆ ಸಲ್ಲಿಸಿದ ವ್ಯಕ್ತಿಗೆ.
- ಸಹಕಾರಿಯು ಮೇಲೆ ಬರೆದಂತೆ ತನ್ನಲ್ಲಿ ಸದಸ್ಯನಿರುವ ಉತ್ತಮವಾಗಿ ವ್ಯವಹರಿಸುತ್ತಿರುವ ಉತ್ತಮ ನಡತೆ, ಉತ್ತಮ ಗಳಿಕೆ ಹಾಗೂ ಸಾಲ ತುಂಬುವ ಸಾಮರ್ಥ್ಯವುಳ್ಳ, ಗೌರವಯುತ ವ್ಯಕ್ತಿಗೆ.
- ಸಾಲ ಪಡೆಯುವ ವ್ಯಕ್ತಿಯು ಬೇಡಿದ ಸಾಲದ ಅವಶ್ಯಕತೆಗಳನ್ನು ಅವನು ಹೊಂದಿದ ವ್ಯವಸಾಯದಲ್ಲಿಯ ಅನುಭವ ಸಾಲ ಪಡೆದು ಕೈಕೊಳ್ಳುವ ವ್ಯವಸಾಯದಲ್ಲಿಯ ಅನುಭವ, ಪರಿಣತೆ ಇದ್ದವರಿಗೆ.
- ಸಾಲಗಳನ್ನು ಪಡೆಯುವ ಉದ್ದೇಶದಲ್ಲಿಯ ವ್ಯವಸಾಯಕ್ಕೆ ಉತ್ತಮ ಭವಿಷ್ಯ ಇದ್ದವರಿಗೆ ಹಾಗೂ ಸಹಕಾರಿಯ ನಿಯಮಗಳಿಗೆ ಸ್ಪಂದಿಸುವ ವ್ಯಕ್ತಿಗೆ.
- ವ್ಯಾಪಾರ ಉದ್ದಿಮೆಗಾಗಿ ಸಾಲ ಅರ್ಜಿ ಮಾಡಿಕೊಂಡು ಎಲ್ಲ ಮಾಹಿತಿ ಗಳೊಂದಿಗೆ ಆಯಕರ, ಮಾರಾಟ ತೆರಿಗೆ, ಸ್ಥಿರಾಸ್ತಿ ಗಳು ಹಾಗೂ ಉತ್ಪನ್ನದ ಇತರ ಮಾಹಿತಿಗಳನ್ನು ಸಲ್ಲಿಸಿದ ವ್ಯಾಪಾರಸ್ಥರಿಗೆ/ಉದ್ಯಮ ದಾರರಿಗೆ.
- ಮಕ್ಕಳ ಶಿಕ್ಷಣಕ್ಕಾಗಿ ಸಾಲ ಪಡೆದಲ್ಲಿ ಮಕ್ಕಳು ಶಿಕ್ಷಣದಲ್ಲಿ ಸಾಧಿಸಿದ ಪ್ರಗತಿಗಳು ಹಾಗೂ ಅವರ ಭವಿಷ್ಯದ ನಿರಿಕ್ಷಣೆಗಳು ತಿಳಿದುಕೊಂಡು ತಂದೆ ಅಥವಾ ವಿಧ್ಯಾರ್ಥಿ ಯಿಂದ ಮುಂದೆ ಸಾಲ ಮರುಪಾವತಿ ಸಾಮರ್ಥ್ಯವಿದ್ದವರಿಗೆ.

**1) ಬಂಗಾರ ಒತ್ತಿ ಸಾಲ (Loan against pledge of gold ornaments) ಮಂಜೂರಿ ಬಗ್ಗೆ:**

1) ಸಾಲ ಪಡೆಯುವವರು ಬಂಗಾರದ ಆಭರಣಗಳ ಮಾಲಿಕರಾಗಿರಬೇಕು
2) ಸಾಲಕ್ಕಾಗಿ ಭದ್ರತೆಗಾಗಿ ಬಂದ ಬಂಗಾರದ ದಾಗೀನಿಗಳನ್ನು ಸುರಕ್ಷಿತ ಪೆಟ್ಟಿಗೆಯಲ್ಲಿ ಲಾಕ ಮಾಡಿ ಮೌಲ್ಯಮಾಪಕರಿಗೆ ಮೌಲ್ಯಮಾಪನಕ್ಕಾಗಿ ಕಳುಹಿಸಬೇಕು. ಮೌಲ್ಯಮಾಪಕರ ಹತ್ತಿರ ಒಂದು ಬೀಗದ ಕೈ ಇರಬೇಕು.
3) ಸಹಕಾರಿಯು ಸಮ್ಮತಿಸಲ್ಪಟ್ಟ ಚಿನ್ನ ಮೌಲ್ಯಮಾಪಕರಿಂದ ಚಿನ್ನದ ಸಾಲ ಬೇಡುವ ಸದಸ್ಯರ ಚಿನ್ನದ ಒಟ್ಟು ತೂಕ ಗ್ರಾಂಗಳಲ್ಲಿ ನಿವ್ವಳ ತೂಕ ಗ್ರಾಂಗಳಲ್ಲಿ ಬರೆದು ಪೇಟೆಯ ಧಾರಣಿ ಅಥವಾ ಆಡಳಿತ ಮಂಡಳಿಯು ನಿರ್ಧರಿಸಿದ ಪೇಟೆಗಿಂತ ಕಡಿಮೆ ಇದ್ದ ದರಗಳಲ್ಲಿ ಮೌಲ್ಯಮಾಪನ ಮಾಡಿಸಬೇಕು.
4) ಚಿನ್ನ ಮೌಲ್ಯಮಾಪನ ಮಾಡುವ ಮೌಲ್ಯಮಾಪಕರು. ಒಳ್ಳೆಯ ಸ್ವಭಾವ, ನಡತೆ ಹಾಗೂ ಸಂಶಯಾಸ್ಪದವಲ್ಲದ ಪತ್ತನ್ನು ಹೊಂದಿರ ಬೇಕು ಅವರಿಂದ ಜಾಮೀನು ಬಾಂಡನ್ನು ಪಡೆದಿರಬೇಕು.
5) ಚಿನ್ನವನ್ನು ಮೌಲ್ಯಮಾಪನಕ್ಕೆ ಕಳುಹಿಸುವಾಗ ಆಗಬಹುದಾದ ತೊಂದರೆಗಳನ್ನು ನಿಭಾಯಿಸಲು ಬಂಗಾರ ಸಾರಿಗೆ ವಿಮೆ ಪಾಲಿಸಿ ಯನ್ನು ಪಡೆಯಬೇಕು (Gold in transit insurance policy).
6) ಆಭರಣಗಳನ್ನು ಭದ್ರ ಕೊಠಡಿಯಲ್ಲಿ/ಬೆಂಕಿ ಬಾಧೆಯಿಲ್ಲದ ಎರಡು ಬೀಗವುಳ್ಳ ಬದ್ರ ಕಪಾಟಿನಲ್ಲಿ (Strong room/fire proof safe under double lock) ದಲ್ಲಿ ಸಾಲಗಳ ಖಾತೆ ಪ್ರಕಾರ ಪ್ರತ್ಯೇಕವಾಗಿ ಇರಿಸಬೇಕು.
7) ಸಾಲಗಾರರ ಭಾಗಶಃ ಸಾಲ ಮರುಪಾವತಿ ಮೇರೆಗೆ ಲೆಕ್ಕ ಪ್ರಕಾರ ದಾಗಿಣೆಗಳನ್ನು ಬಿಡುಗಡೆ ಮಾಡಬೇಕು. ಆದರೆ ಸಾಲದ ಮೇಲೆ ಇರುವ ಬಾಕಿ ಬಡ್ಡಿಯನ್ನು ಕಡ್ಡಾಯವಾಗಿ ವಸೂಲು ಮಾಡಿರಬೇಕು.
8) ಬಂಗಾರದ ದಾಗಿಣೆಗಳ ಮೇಲೆ ಇತರ ವಸ್ತುಗಳಂತೆ ಬೆಂಕಿ, ಲೂಟಿ, ದರೋಡೆ ಜ್ವಾಲಾಮುಖಿ ದಂಗೆ ಇವೆಲ್ಲವುಗಳಿಂದ ಸುರಕ್ಷತೆಗಾಗಿ ಅವಶ್ಯವಿದ್ದ ಎಲ್ಲ ವಿಮಾ ಪಾಲಿಸಿಗಳನ್ನು ಆಭರಣಗಳ ಪೂರ್ಣ ಬೆಲೆಯ ಮೇಲೆ ಪಡೆಯಬೇಕು.

**ಸಾಲಕ್ಕೆ ಪಡೆಯಬೇಕಾದ ಕಾಗದಪತ್ರಗಳು:**

- ಡಿಮಾಂಡ ಪ್ರಾಮಿಸರಿ ನೋಟ
- ನಿರಂತರ ಭದ್ರತೆಯ ಪತ್ರ
- ಆಭರಣ ಒತ್ತಿ ಪತ್ರ
- ಲೀನ ಮತ್ತು ಸೆಟ್ ಆಫ್ ಪತ್ರ

(ಮುಂದಿನ ಸಂಚಿಕೆಗೆ...)

ದೃಷ್ಟಿಯಿಂದ ಈಗಲೂ ಹಳ್ಳಿಯಲ್ಲಿ ಹೆಣ್ಣು ಮಕ್ಕಳು ಹೊರಗೆ ಬರಲು ಹಿಂಜರಿಯುತ್ತಾರೆ. ಇದು ಕೆಲ ವರ್ಷದ ಹಿಂದಿನ ಮಾತು. ಈಗ ಪರಿಸ್ಥಿತಿ ಸುಧಾರಿಸಿದೆ ಅದಲ್ಲದೇ ನಾವಾಗಿಯೇ ಮುಂದೆ ಹೋಗಿ ಸಹಕಾರಿಯನ್ನು ಹುಟ್ಟು ಹಾಕಲು ಪ್ರೇರೆಪಿಸಿದಾಗ ಹೀಗೆ ಮಾಡುವುದರಿಂದ ನಿಮಗೆ ಮತ್ತು ನಮಗೆ ಏನು ಲಾಭ ಎಂದು ಕೇಳುತ್ತಿದ್ದರು. ಆಗ ನಾನು ಹೇಳುತ್ತಿದ್ದೆ, ನೀವು ಯಾರೋ? ನಾನು ಯಾರೋ? ಆದರೆ ಈ ಸಹಕಾರಿ ಮನೋಭಾವನೆಯಿಂದ ಇಲ್ಲಿಯವರೆಗೆ ಬಂದಿದ್ದೇನೆ. ನಿಮ್ಮ ಗೆಳೆತನವಾಗಿದೆ ಹಾಗಾಗಿ ನಮ್ಮ ಕಷ್ಟ ಸುಖದಲ್ಲಿ ನೀವು ನಿಮ್ಮ ಕಷ್ಟ-ಸುಖದಲ್ಲಿ ನಾನು ಭಾಗಿಯಾಗಬಹುದು. ಇಂಥ ಮನಸ್ಸು ನಮಗೆ ಎಷ್ಟು ದುಡ್ಡು ಕೊಟ್ಟರೇ ಸಿಗುತ್ತದೆ? ಇದ್ದಕ್ಕಿಂತ ಹೆಚ್ಚಿನ ಲಾಭ ಇನ್ನೇನೂ ಬೇಕು? ಆಗೆಲ್ಲ ಅವರು ಒಪ್ಪಿಕೊಳ್ಳುತ್ತಿದ್ದರು. ಆದರೆ ಸರ್ಕಾರದ ಸಬ್ಸಿಡಿ ಲೋನಿನಿಂದಾಗಿ ಯಾರೂ ತಮ್ಮ ಕಾಲ ಮೇಲೆ ತಾವು ನಿಲ್ಲಲು ತಯಾರಿಲ್ಲ. ಅಲ್ಲದೇ ನಿಸ್ವಾರ್ಥ ಸೇವೆ ಮಾಡುವವರ ಮೇಲೆಯೂ ಅನುಮಾನ ಪಡುವಂತಹ ಸಂದರ್ಭ ಬಂದೊದಗಿದೆ. ಆದರೂ ಸೇವೆ ಮನೋಭಾವನೆ ಇದ್ದವರೂ ಯಾರು ಏನೇ ಅಂದರು ತಮ್ಮ ಕೆಲಸವನ್ನು ಮಾಡೇ ಮಾಡುತ್ತಾರೆ. "ಲಿಜತ್ ಪಾಪಡ್". ಹತ್ತು ಮಂದಿ ಹೆಣ್ಣು ಮಕ್ಕಳಿಂದ ಪ್ರಾರಂಭವಾದ ಈ ಕೆಲಸ ಇಂದು ದೇಶಾದ್ಯಂತ ಹೆಸರುವಾಸಿಯಾಗಿದೆ. ಈ ರೀತಿ ಸಹಕಾರಿ ಮನೋಭಾವನೆ ಇರುವಂತಹ ಸ್ತ್ರೀಯರು ಹುಟ್ಟು ಹಾಕಿದ ಎಷ್ಟೋ ಸಂಸ್ಥೆಗಳಿವೆ. ಆಂಧ್ರಪ್ರದೇಶದ ವಾರಂಗಲ್ ಜಿಲ್ಲೆಯಲ್ಲಿ ಸಣ್ಣ ಸಣ್ಣ ಸಂಸ್ಥೆಗಳು ಶೇರು ಹಾಕಿ ಒಂದು ದೊಡ್ಡ ಹಾಲಿನ ಡೈರಿಯನ್ನೇ ಹುಟ್ಟು ಹಾಕಿದ್ದಾರೆ.

"ಸಹಚರ"ದಿಂದ ಸಹಕಾರಿಗಳನ್ನು ಹುಟ್ಟು ಹಾಕಲು ಹೋದಾಗ ಇದರಿಂದ ನಮಗೆ ಏನು ಸಿಗುತ್ತದೆ ಎಂದು ಕೇಳಿದೆ, ನಂತರ ನಿಸ್ವಾರ್ಥತೆಯಿಂದ ಬಂದು ಒಂದು ಸಂಸ್ಥೆಯ ಕಾರ್ಯದರ್ಶಿಯಾಗಿ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿದೆ. ಇದರಿಂದ ನನಗೆ ಕೋಟಿ ರೂ. ಸಿಕ್ಕಿದ ಸಂತೋಷಕ್ಕಿಂತಲೂ ಹೆಚ್ಚಿಗೆ ಸಂತೋಷ ವಾಗಿದೆ. ನನ್ನ ಸಹಕಾರಿ ಕ್ಷೇತ್ರದ ಇಷ್ಟು ದಿನದ ಶ್ರಮ ಸಾರ್ಥಕವೆನಿಸುತ್ತದೆ.

ಒಂದು ಮನೆಯಲ್ಲಿ ಒಬ್ಬ ಪುರುಷ ಶಿಕ್ಷಣ ಕಲಿತರೆ ಆ ಕುಟುಂಬಕ್ಕೆ ಆಧಾರವಾಗುತ್ತಾನೆ. ಆದರೆ ಒಬ್ಬ ಸ್ತ್ರೀ ಶಿಕ್ಷಣ ಕಲಿತರೆ ಸಮಾಜಕ್ಕೆ ಆಧಾರವಾಗಿ ಕಾರ್ಯನಿರ್ವಹಿಸುವ ಶಕ್ತಿ ಅವಳಲ್ಲಿದೆ.ಸಹಕಾರ ಕ್ಷೇತ್ರದ ಬಗ್ಗೆ ಮಹಿಳೆಯರಿಗೆ ಶಿಕ್ಷಣ ತರಬೇತಿ ನೀಡಿ ಅವರನ್ನು ತೊಡಗಿಸಿ ಕೊಂಡಾಗ ಸಮಾಜದ ಆರ್ಥಿಕ ಅಭಿವೃದ್ಧಿ ಸಾಧ್ಯ ಎಂಬುದು ನನ್ನ ಅಭಿಪ್ರಾಯವಾಗಿದೆ. ಮಹಿಳೆಯರಿಗೆ ಸಹಕಾರ ಹಾಗೂ ಸಮಾಜ ಹೆಚ್ಚಿನ ಅವಕಾಶ ಮಾಡಿಕೊಡಬೇಕೆಂಬುದು ನನ್ನ ವಿನಂತಿಯಾಗಿದೆ.

ಈ ನನ್ನ ಸಾಧನೆಗೆ ಪ್ರೇರಕರು ಹಾಗೂ ಪ್ರೋತ್ಸಾಹಕರಾಗಿ ನನ್ನ ಪತಿ ಶ್ರೀ ಅಮರೇಶ ಪಾಟೀಲ, ಶ್ರೀ ಮನೋಹರ ಮಸ್ಕಿ, ಶ್ರೀ ಆರ್. ಸತ್ಯನಾರಾಯಣ (ಸತ್ಯ), ಶ್ರೀ ಬಿ. ರಾಜಶೇಖರ್, ಶ್ರೀ ಆರ್.ಜಿ. ದೇಶಪಾಂಡೆ ಯವರುಗಳು ಅಭಿನಂದನಾರ್ಹರು. ಇದರ ಜೊತೆಗೆ ಸಹಕಾರ ಭಾರತೀಯವರು ನನ್ನ ಸೇವೆಯನ್ನು ಗುರುತಿಸಿ ಪ್ರೋತ್ಸಾಹಿಸಿದರು. ಅವರಿಗೂ ನನ್ನ ಕೃತಜ್ಞತೆಗಳು.

## ಡಾ॥ ವಿ.ಎಸ್. ಆಚಾರ್ಯರಿಗೆ ಶ್ರದ್ಧಾಂಜಲಿ



ರಾಜ್ಯದ ಹಿರಿಯ ಮುತ್ಸದ್ಧಿ, ರಾಜಕಾರಣಿ ಶಿಕ್ಷಣ ತಜ್ಞ, ಆರೋಗ್ಯ ತಜ್ಞ, ಸಾಮಾಜಿಕ ಕಳಕಳಿ ಇದ್ದ ಡಾ॥ ವಿ.ಎಸ್. ಆಚಾರ್ಯರವರು ದಿನಾಂಕ 14-02-2012ರಂದು ನಿಧನರಾಗಿದ್ದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸಭೆಯಲ್ಲಿ ದಿವಂಗತರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು.

ಆಚಾರ್ಯರು ಸ್ವಭಾವತಃ ಬೇರೆಯವರ ಕಷ್ಟಗಳಿಗೆ ಸ್ಪಂದಿಸಿ ಸಹಕಾರ ಹಸ್ತ ನೀಡುವವರು ಅದು ವೃತ್ತಿಯಿಂದಲೂ ಬಂದಂತಹ ವರವೆನ್ನ ಬಹುದು, ಯಾರೊಬ್ಬರಿಗೂ ಕೋಪದಿಂದ ಮಾತನಾಡದ ವ್ಯಕ್ತಿಯಾಗಿದ್ದರು,. ಎಲ್ಲರನ್ನು ಪ್ರೀತಿ, ವಿಶ್ವಾಸದಿಂದ ಕಾಣುತ್ತಿದ್ದರು. ಇದಕ್ಕೆ ನೇರ ನಿದರ್ಶನವೆಂದರೆ ಎಲ್.ಕೆ. ಅಡ್ವಾಣಿಯವರ ಆತ್ಮ ಕಥನದಲ್ಲಿ ಪಕ್ಷದ ಬೆಳವಣಿಗೆ ಬಗ್ಗೆ ವಿಚಾರ ಬಂದಾಗ ವಿ.ಎಸ್. ಆಚಾರ್ಯರವರ ಹೆಸರನ್ನು ಗುರುತಿಸಿದ್ದಾರೆ. ಶ್ರಮ ಜೀವಿ, ಸ್ವಯಂ ಸೇವಕ, ಸಜ್ಜನ ರಾಜಕಾರಣಿ, ಅಜಾತ ಶತ್ರು, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾಗಿದ್ದ ಶ್ರೀಯುತ ವಿ.ಎಸ್.ಆಚಾರ್ಯರವರ ನಿಧನದಿಂದ ನಮ್ಮ ರಾಜ್ಯವು ಒಬ್ಬ ಧೀಮಂತ ನಾಯಕನನ್ನು ಕಳೆದುಕೊಂಡಂತಾಗಿದೆ.



ಶ್ರೀಯುತ ವಿ.ಎಸ್. ಆಚಾರ್ಯರು ಸಂಯುಕ್ತ ಸಹಕಾರಿಯೊಂದಿಗೆ ಹಾಗೂ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರೊಂದಿಗೆ ಕೂಡ ನಿಕಟ ಸಂಪರ್ಕ ಹೊಂದಿದ್ದರು. ಅಲ್ಲದೆ ಸೌಹಾರ್ದ ಸಹಕಾರಿಗಳಿಗೆ ಇ-ಸ್ಟಾಂಪಿಂಗ್ ಸೌಲಭ್ಯ ಒದಗಿಸಲು ಹೆಚ್ಚಿನ ಶ್ರಮವಹಿಸಿದ್ದಾರೆ. ಶ್ರೀಯುತರು ಸಂಯುಕ್ತ ಸಹಕಾರಿಯ ಅಂಗಸಂಸ್ಥೆಯಾಗಿದ್ದ ಸ್ಟ್ಯಾಪ್-ಕೆ ಎಂಬಿಎ ಕಾಲೇಜಿನ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಲ್ಲದೆ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರ ವಿತರಿಸಿದ್ದನ್ನು ಸ್ಮರಿಸಲಾಯಿತು.

# ಸಹಕಾರಿ ನಿಬಂಧಕರ ಸುತ್ತೋಲೆ – 223

**ವಿಷಯ : ವಿವಿಧ ವಿಷಯಗಳಿಗೆ ಸಂಬಂಧಿಸಿದ ಪ್ರಸ್ತಾವೆಗಳೊಂದಿಗೆ ಸಲ್ಲಿಸಬೇಕಾದ ಮಾಹಿತಿ ಕುರಿತು.**

ಕೇಂದ್ರ ಕಛೇರಿಯ ಕಾನೂನು ಕೋಶ ವಿಭಾಗದಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮದ ಅವಕಾಶಗಳಡಿಯಲ್ಲಿ ನೋಂದಣಿ, ಉಪವಿಧಿ ತಿದ್ದುಪಡಿ ಅನುಮೋದನೆ ಬಗ್ಗೆ ಸಲ್ಲಿಸಲಾಗುವ ಪ್ರಸ್ತಾವನೆಯೊಂದಿಗೆ ಲಗತ್ತಿಸಬೇಕಾದ ಹಾಗೂ ಒದಗಿಸಬೇಕಾದ ಮಾಹಿತಿಯ ಬಗ್ಗೆ ಸಾರ್ವಜನಿಕರು ಸಹಕಾರಿಗಳಲ್ಲಿ ಹಾಗೂ ಇಲಾಖಾಧಿಕಾರಿಗಳಲ್ಲಿ ಅರಿವು ಮೂಡಿಸುವ ಔಚಿತ್ಯವನ್ನು ಮನಗಾಣಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತಾವೆ ಸಲ್ಲಿಸುವ ಸಂದರ್ಭದಲ್ಲಿ ಈ ಮುಂದೆ ನಮೂದಿಸಿರುವ ಆಯಾ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಪರಿಶೀಲಿಸಿ ಸಲ್ಲಿಸಲು ಕೋರಲಾಗಿದೆ. ಇದರಿಂದ ಅನಗತ್ಯ ವಿಳಂಬ ಹಾಗೂ ವೃಥಾ ಪತ್ರವ್ಯವಹಾರ ತಪ್ಪಿಸಿ, ಜರೂರಾಗಿ ವಿಲೇವಾರಿ ಮಾಡಲು ಹಾಗೂ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಅನುವಾಗುತ್ತದೆ.

**I. ಸೌಹಾರ್ದ ಸಹಕಾರಿಗಳ ನೋಂದಣಿ ಸಂದರ್ಭದಲ್ಲಿ ನೋಂದಣಿ ಪೂರ್ವ ಷೇರು ಸಂಗ್ರಹಣೆಗೆ ಪ್ರಸ್ತಾವೆಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು.**

**(ಅ) ಸಭಾ ನೋಟೀಸು :** ಉದ್ದೇಶಿತ ಸಹಕಾರಿಯ ಸ್ಥಾಪನೆಗೆ ಸಭೆಕರೆಯುವ ನೋಟೀಸಿನಲ್ಲಿ ಸಭಾಸ್ಥಳ, ಸಭೆಯ ಉದ್ದೇಶ, ಇತ್ಯಾದಿಗಳನ್ನು ಒಳಗೊಂಡಿರಬೇಕು.

**(ಆ) ಸಭಾ ನಡಾವಳಿಗಳು :** ಅಂಶ(ಅ)ರಲ್ಲಿ ನಮೂದಿಸಿರುವ ಸಭೆಯಲ್ಲಿ ಕೆಳಕಂಡ ವಿಷಯಗಳನ್ನು ಚರ್ಚಿಸಿ ನಿರ್ಣಯಿಸಿರಬೇಕು.

(1) ಉದ್ದೇಶಿತ ಸಹಕಾರಿಯ ಹೆಸರು ಮತ್ತು ಕಾರ್ಯವ್ಯಾಪ್ತಿ.

(2) ಪ್ರವರ್ತಕರು ಮತ್ತು ಮುಖ್ಯ ಪ್ರವರ್ತಕರ ಆಯ್ಕೆ

(3) ಇಲಾಖೆಯೊಡನೆ ಪತ್ರ ವ್ಯವಹರಿಸಲು ಮುಖ್ಯ ಪ್ರವರ್ತಕರಿಗೆ ಅಧಿಕಾರ

(4) ಉಪವಿಧಿಗಳ ಅನುಮೋದನೆ.

(ಇ) ನಮೂನೆ 1 ರಲ್ಲಿ ಮಾಹಿತಿ

(ಈ) ಪರಿಣಿತರಿಂದ ತಯಾರಿಸಲ್ಪಟ್ಟ ಯೋಜನಾ ವರದಿ, ಪ್ರಮಾಣ ಪತ್ರ

(ಉ) ವ್ಯಕ್ತಿಗತ ಮಾಹಿತಿ

(ಊ) ಪ್ರವರ್ತಕರುಗಳ ವ್ಯಕ್ತಿಗತ ಮಾಹಿತಿಯ ಕ್ರೋಢೀಕೃತ ತಃಖ್ತೆ.

(ಋ) ಬಾಡಿಗೆ ಕರಾರು ಪತ್ರ

(ಎ) ಇತರೆ ಪೂರಕ ದಾಖಲೆಗಳು

**II . ಉಪನಿಯಮ ತಿದ್ದುಪಡಿಗೆ ಪ್ರಸ್ತಾವನೆ ಸಲ್ಲಿಸುವಾಗ ಸಲ್ಲಿಸಬೇಕಾದ ಮಾಹಿತಿ**

(1) ಸರ್ವ ಸದಸ್ಯರ ಸಭಾ ನೋಟೀಸ್

(2) ಸದರಿ ನೋಟೀಸಿನಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 11(1)ರ ಪರಂತು ಪ್ರಕಾರ ಉಪನಿಯಮ ತಿದ್ದುಪಡಿ ಬಗ್ಗೆ ಪ್ರತಿ ಸದಸ್ಯರಿಗೂ ತಿಳಿಸಿರಬೇಕು

(3) ಸರ್ವ ಸದಸ್ಯರ ಸಭಾ ನೋಟೀಸುಗಳನ್ನು ಸದಸ್ಯರಿಗೆ ತಲುಪಿಸಿದ ಬಗ್ಗೆ ಅಧಿನಿಯಮದ ರೀತ್ಯಾ ಅಗತ್ಯವಿರುವ ದಾಖಲೆ

(4) ಸರ್ವ ಸದಸ್ಯರ ಸಭಾ ನಡವಳಿಗಳು ಮತ್ತು ಹಾಜರಾತಿ ವಿವರಗಳು (ಮುಖ್ಯ ಕಾರ್ಯನಿರ್ವಹಣಾಧಿಕಾರಿ ಧೃಢೀಕೃತಪ್ರತಿಗಳು)

(5) ನಿಗದಿತ ನಮೂನೆ 91) ರಿಂದ ರಲ್ಲಿ ಮಾಹಿತಿ.

(6) ನಮೂನೆ 5ರಲ್ಲಿ ಉಪ ನಿಯಮ ಅನುಮೋದನೆ ಅಥವಾ ತಿರಸ್ಕಾರದ ಬಗ್ಗೆ ಒಕ್ಕಣೆ ನಮೂದಿಸಲು ಕೆಳಭಾಗದಲ್ಲಿ ಸಾಕಷ್ಟು ಸ್ಥಳಾವಕಾಶವಿರತಕ್ಕದ್ದು.

(7) ಸಹಕಾರಿಯು ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸುವ ಸಂದರ್ಭದಲ್ಲಿ ಹಾಲಿ ಇರುವ ಕಾರ್ಯವ್ಯಾಪ್ತಿಯ ಸಹಕಾರಿಗಳ ನಿಬಂಧಕರ ಮೂಲಕ ಕಾರ್ಯವ್ಯಾಪ್ತಿ ವಿಸ್ತರಣೆ ಅನುಮೋದಿಸುವ ಅಧಿಕಾರವುಳ್ಳ ಮೇಲಿನ ಪ್ರಾಧಿಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಸರ್ವ ಸದಸ್ಯರ ಸಭೆಯ ದಿನಾಂಕದಿಂದ 30 ದಿನದೊಳಗೆ ತಿದ್ದುಪಡಿ ಪ್ರಸ್ತಾವನೆಯನ್ನು ನೋಂದಾಯಿತ ಅಂಚೆ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

ಸಹಿ/–

**(ಎಸ್.ಜಿ.ಹೆಗಡೆ)**

ಸಹಕಾರ ಸಂಘಗಳ ನಿಬಂಧಕರು,

ಕರ್ನಾಟಕ ರಾಜ್ಯ, ಬೆಂಗಳೂರು.



## ನಿಮಗೆ ಗೊತ್ತೆ?

1. ಒಂದು ಸಾಮಾನ್ಯ ಪೆನ್ಸಿಲ್‌ನಿಂದ 50,000 ಶಬ್ದಗಳನ್ನು ಬರೆಯಬಹುದು 35 ಮೈಲು ಉದ್ದ ಗೆರೆ ಎಳೆಯ ಬಹುದು.
2. ಪ್ರಪಂಚದ ಅತಿ ದೊಡ್ಡ ಗ್ರಂಥಾಲಯ "ದಿ ಲೈಬ್ರರಿ ಆಫ್ ಕಾಂಗ್ರೆಸ್" ಅಮೇರಿಕಾದ ವಾಶಿಂಗ್ಟನ್ನಲ್ಲಿದೆ.
3. ಒಂದು ಮಗು ಒಂದು ದಿನಕ್ಕೆ 400 ಬಾರಿ ನಗುತ್ತದೆ. ಆದರೆ ವಯಸ್ಕರು ಕೇವಲ 15 ಬಾರಿ ನಗುತ್ತಾರೆ.
4. ಒಂದು 4 ವರ್ಷದ ಮಗು ದಿನಕ್ಕೆ 400 ಪ್ರಶ್ನೆಗಳನ್ನು ಕೇಳುತ್ತದೆ.
5. ನಗು ಒಂದು ನೋವು ನಿವಾರಕ ಔಷಧ ಎಂಬುದು ವೈದ್ಯಕೀಯ ಸಂಶೋಧನೆ.
6. ಒಬ್ಬ ಸಾಮಾನ್ಯ ಮನುಷ್ಯ ತನ್ನ ಜೀವಿತ ಅವಧಿಯಲ್ಲಿ ಊಟ ಮಾಡುವುದಕ್ಕಾಗಿ 5 ವರ್ಷ ಕಳೆಯುತ್ತಾನೆ.
7. ಇರುವೆಗಳು ನಿದ್ದೆ ಮಾಡುವುದಿಲ್ಲ.
8. ದಿನದ ಕಾರ್ಯಚಟುವಟಿಕೆಗಳನ್ನು ಹೊರತುಪಡಿಸಿ ಒಬ್ಬ ವ್ಯಕ್ತಿ ಪ್ರತಿದಿನ 20 ನಿಮಿಷ ನಡೆದಾಡಿದಾಗ (ವಾಕಿಂಗ್) ಒಂದು ವರ್ಷದಲ್ಲಿ 7 ಪೌಂಡ ಫ್ಯಾಟ್ ಕಡಿಮೆಯಾಗುತ್ತದೆ.
9. ಒಂದು ಗ್ರಾಂ ಮಣ್ಣಿನಲ್ಲಿ 10 ಮಿಲಿಯನ್ ಬ್ಯಾಕ್ಟೀರಿಯಗಳಿರುತ್ತವಂತೆ.
10. ಜಗತ್ತಿನ ಅತ್ಯಂತ ಕಿರಿಯ (ಎತ್ತರದಲ್ಲಿ) ಶ್ರೀ ಗುಲಮೊಹಮ್ಮದ ಇವರು 1957 ರಿಂದ 1997ರವರೆಗೆ ಜೀವಿತರಿದ್ದರು. ಇವರು ನಮ್ಮ ದೇಶದವರು. ಇವರ ಅಳತೆ 1' 10"
11. ಭಾರತೀಯ ರೇಲ್ವೆ ಪ್ರಪಂಚ ದಲ್ಲಿ ಅತಿ ಹೆಚ್ಚು ನೌಕರರನ್ನು ಹೊಂದಿದೆ. ನೌಕರರ ಸಂಖ್ಯೆ 1.6 ಮಿಲ್ಲಿಯನ್.
12. ಭಾರತ ಈಗ ಪೋಲಿಯೊ ರಹಿತ ದೇಶ.



ತುಮಕೂರಿನ ಶ್ರೀ ತಿಮ್ಮಣ್ಣನವರ ವಿವಿದೊದ್ದೇಶ ಸೌಹಾರ್ದ ಸಹಕಾರಿ ನಿ.,ಯಲ್ಲಿ ಇತ್ತೀಚೆಗೆ ಜರುಗಿದ ಸಮಾರಂಭದಲ್ಲಿ ಸಹಕಾರಿ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರ್‌ರವರೊಂದಿಗೆ ಜಿಲ್ಲಾ ನಿರ್ದೇಶಕರಾದ ಶ್ರೀ ಗಂಗಾಧರಯ್ಯ ಇತರ ಸಹಕಾರಿಗಳನ್ನು ಕಾಣಬಹುದು.

# ಬಡ್ಜೆಟ್ ಬಗ್ಗೆ ಮುಖ್ಯಮಂತ್ರಿಯವರೊಂದಿಗೆ ಸಹಕಾರ ಭಾರತಿ ಪದಾಧಿಕಾರಿಗಳ ಚರ್ಚೆ



ಸಹಕಾರ ಭಾರತಿಯ ರಾಷ್ಟ್ರೀಯ ಉಪಾಧ್ಯಕ್ಷ ಹಾಗೂ ಕ್ಯಾಂಪ್ಕೋ ಅಧ್ಯಕ್ಷ ಶ್ರೀ ಕೊಂಕೋಡಿ ಪದ್ಮನಾಭ, ಸಹಕಾರ ಭಾರತೀಯ ರಾಜ್ಯ ಸಂಚಾಲಕ ಹಾಗೂ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ, ಸಹಕಾರ ಭಾರತೀಯ ರಾಜ್ಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ಮುಖ್ಯಮಂತ್ರಿ ಶ್ರೀ ಸದಾನಂದಗೌಡರವರನ್ನು ಭೇಟಿಮಾಡಿ ಮುಂಬರುವ ಬಡ್ಜೆಟ್‌ನಲ್ಲಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸಂಬಂದಿಸಿದಂತೆ ಹೆಚ್ಚಿನ ಹಣಕಾಸು ಒದಗಿಸುವಂತೆ ಹಾಗೂ ಅಭಿವೃದ್ಧಿಗೆ ಪೂರಕವೆನಿಸುವ ಕೆಲವು ಕ್ರಮಗಳನ್ನು ಜಾರಿಮಾಡಲು ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿದರು ಚರ್ಚಿತವಾದ ವಿಷಯಗಳು.

1. ಸಹಕಾರ ಸಂಸ್ಥೆಗಳಿಂದ ಖರೀದಿಯ ಬಗ್ಗೆ ಪಾರದರ್ಶಕ ಕಾಯ್ದೆಯಿಂದ ವಿನಾಯಿತಿ
2. ಸಹಕಾರಿ ಸಂಸ್ಥೆಗಳಿಂದ ಮಾರಾಟ ಮಾಡುವ ಎಲ್ಲ ಕೃಷಿ ಯಂತ್ರೋಪಕರಣಗಳು, ಪರಿಕರಗಳು, ರಾಸಾಯನಿಕ ಗೊಬ್ಬರಗಳು, ಮತ್ತು ಸಾವಯವ ವಸ್ತುಗಳ ಮಾರಾಟಕ್ಕೆ ಈಗ ನಿಗದಿಯಾಗಿರುವ 14% ನಿಂದ 5% ಇಳಿಸುವುದರಿಂದ ರೈತರಿಗೆ ಸಹಾಯ ಮಾಡುವುದು.
3. ರೋಗ ಪೀಡಿತ ಪ್ರದೇಶಗಳ ಅಡಿಕೆ ಬೆಳೆಯುವ ರೈತರಿಗೆ ವಿಶೇಷ ಪ್ಯಾಕೇಜನ್ನು ಕೃಷಿ ಬಜೆಟ್‌ನಲ್ಲಿ ಘೋಷಿಸಲು ಕೋರಿಕೆ.
4. ಪ್ರತಿ ಜಿಲ್ಲೆಗಳಲ್ಲಿ ಸಹಕಾರಿ ನ್ಯಾಯಾಲಯಗಳ ಸ್ಥಾಪನೆ
5. ಸೌಹಾರ್ದ ಸಹಕಾರಿ ಕಾಯ್ದೆಗೆ ತಿದ್ದುಪಡಿ
6. ಸಂವಿಧಾನದ 111 ನೇ ತಿದ್ದುಪಡಿಯ ಪ್ರಕಾರ ಸಹಕಾರ ಕಾಯ್ದೆಗೆ ತಿದ್ದುಪಡಿ ಅಳವಡಿಸುವುದು
7. ಕೇಂದ್ರ ಸರಕಾರದ ಉದ್ದೇಶಿತ ನೇರ ತೆರಿಗೆ ಸಂಹಿತೆಯ ಜಾರಿಯಲ್ಲಿ ಸಹಕಾರ ಸಂಸ್ಥೆಗಳನ್ನು ಕೈ ಬಿಡುವಂತೆ ಕ್ರಮ.
8. ಸಹಕಾರ ಸಂಘಗಳ ಚುನಾವಣೆಗಾಗಿ ಒಂದು ಆಯೋಗವನ್ನು ರಚಿಸಲು ಕ್ರಮ.
9. ಸಹಕಾರ ಸಂಸ್ಥೆಗಳ ಲೆಕ್ಕ ಪರಿಶೋಧನಾ ಇಲಾಖೆಯನ್ನು ಸಮಾಪ್ತಿಗೊಳಿಸಿ ಚಾರ್ಟೆರ್ಡ ಅಕೌಂಟೆಂಟರಗಳ ಪ್ಯಾನೆಲ್ ರಚಿಸುವುದು
10. ಸಹಕಾರ ಸಂಘಗಳ ಕಾಯ್ದೆ ಸೆಕ್ಷನ್ 30 (ಬಿ)ಯಲ್ಲಿ ರಿಜಿಸ್ಟಾರ ಅಧಿಕಾರ ದುರುಪಯೋಗವಾಗದಂತೆ ಕಾಯ್ದೆಯಲ್ಲಿ ಸೂಕ್ತ ಕ್ರಮವಿಡುವುದು.
11. ರೈತರಿಗೆ ನೀಡುವ ಸಬ್ಸಿಡಿ ನೇರವಾಗಿ ರೈತರ ಖಾತೆಗಳಿಗೆ ಸಂದಾಯವಾಗುವಂತೆ ವ್ಯವಸ್ಥೆಗೆ ಕ್ರಮ
12. ಡಾ.ವೈದ್ಯನಾಥನ್ ವರದಿಯನ್ನು ಸಂಪೂರ್ಣವಾಗಿ ಜಾರಿಗೊಳಿಸುವುದು
13. ರೈತರಿಗೆ ಪ್ರತಿ ಲೀಟರ್ ಹಾಲಿಗೆ ನೀಡುತ್ತಿರುವ ಸಬ್ಸಿಡಿ ರೂ 2/- ಮುಂದುವರೆಸುವುದು.

ಮನವಿಯನ್ನು ಸ್ವೀಕರಿಸಿದ ಮುಖ್ಯಮಂತ್ರಿಗಳು ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಸರಕಾರ ಬದ್ಧವಾಗಿದೆ ಎಂದು ತಿಳಿಸಿದರು.




ಸಂತೆಮರಳ್ಳಿಯಲ್ಲಿ ವಿಶ್ವಭಾರತಿ ವಿವಿಧೋದ್ದೇಶ ಸೌಹಾರ್ದ ಸಹಕಾರಿಯಲ್ಲಿ 'ಇ' ಸ್ಟಾಪಿಂಗ್ ವ್ಯವಹಾರ ಪ್ರಾರಂಭ.

## ನಿರ್ದೇಶಕರ ಅನರ್ಹತೆ

ಬೆಳಗಾವಿ ಜಿಲ್ಲೆಯ ಬಡೆ ಬಜಾರನಲ್ಲಿರುವ "ಶ್ರೀ ಅಹಿಂಸ ಸೌಹಾರ್ದ ಸಹಕಾರಿ"ಯ ನಿರ್ದೇಶಕರುಗಳಾದ 1. ಶ್ರೀ ಕಿರಣ ಪೋರವಾಲ 2. ಶ್ರೀ ಅಭಿಜಿತ ಎಸ್.ಶಹಾ ಇವರು ಸೌಹಾರ್ದ ಸಹಕಾರಿ ಕಾಯ್ದೆ ಕಲಂ 25 (1) (ಇ)ರನ್ವಯ ಸಹಕಾರಿಯಿಂದ ಪಡೆದ ಸಾಲಕ್ಕೆ ಸುಸ್ತಿದಾರಾಗಿದ್ದ ಹಿನ್ನೆಲೆಯಲ್ಲಿ ಸಹಕಾರಿ ಕಾಯ್ದೆ ಕಲಂ 25(4) ಅನ್ವಯ ಸಹಕಾರಿಯ ನಿರ್ದೇಶಕರಾಗಿರುವುದರಿಂದ ಅನರ್ಹಗೋಳಿಸಿ ಸಂಯುಕ್ತ ಸಹಕಾರಿಯು 18-02-2012 ರಿಂದ ಜಾರಿಗೆ ಬರುವಂತೆ ಆದೇಶ ನೀಡಿದೆ.

## ಲೆಕ್ಕಪರಿಶೋಧಕರ ನೇಮಕಾತಿ

ಸಂಯುಕ್ತ ಸಹಕಾರಿಯ ಸುತ್ತೋಲೆಯಂತೆ ಸೌಹಾರ್ದ ಸಹಕಾರಿಗಳ ಲೆಕ್ಕ ಪರಿಶೋಧನೆ ಪ್ರತಿವರ್ಷ ಆಗಸ್ಟ್ 31 ಕ್ಕೆ ಮುಕ್ತಾಯಗೋಳ್ಳಬೇಕು. ಈ ವಿಷಯ ತಿಳಿಯದಿರುವ ಸೌಹಾರ್ದ ಸಹಕಾರಿಗಳು ಲೆಕ್ಕಪರಿಶೋಧನೆ ಮಾಡಿಸದೆ ಇರುವುದನ್ನು ಗಮನಿಸಿ ಸಹಕಾರಿಯು 238 ಸೌಹಾರ್ದ ಸಹಕಾರಿಗಳಿಗೆ ಲೆಕ್ಕ ಪರಿಶೋಧಕರನ್ನು ನೇಮಕ ಮಾಡಿ ಲೆಕ್ಕಪರಿಶೋಧನೆ ಪ್ರಕ್ರೀಯೆ ಪೂರ್ಣವಾಗುವಂತೆ ಕ್ರಮವಿಡಲಾಗಿದೆ. ಇದರಲ್ಲಿ 126 ಸಹಕಾರಿಗಳ ಲೆಕ್ಕಪರಿಶೋಧನೆ ಮಾಡಿರುವ ಬಗ್ಗೆ ವರದಿಗಳು ಸಂಯುಕ್ತ ಸಹಕಾರಿಗೆ ಬಂದಿರುತ್ತವೆ.

## ಚಾರ್ಟರ್ಡ್ ಅಕೌಂಟೆಂಟರ್‌ಗಳಿಗೆ ಕಾರ್ಯಗಾರ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಸೌಹಾರ್ದ ಸಹಕಾರಿಗಳ ಲೆಕ್ಕ ಪರಿಶೋಧನೆಗಾಗಿ, ಪಟ್ಟಿಯನ್ನು ಪ್ರತಿವರ್ಷ ಸಿದ್ಧಪಡಿಸುತ್ತಿದೆ. ಹೊಸದಾಗಿ ನೊಂದಾಯಿಸಿಕೊಳ್ಳಲು ಅಪೇಕ್ಷಿಸುವ ಚಾರ್ಟರ್ಡ್ ಆಕೌಂಟೆಂಟರ್‌ಗಳಿಗೆ ಹಾಗೂ ಲೆಕ್ಕ ಪರಿಶೋದಕರಿಗೆ ಇದೇ ಮಾರ್ಚ್ ತಿಂಗಳ 30ರ ಬೆಳಗ್ಗೆ 10.00 ಘಂಟೆಗೆ ತರಬೇತಿ ಕಾರ್ಯಕ್ರಮವನ್ನು ಬೆಂಗಳೂರು ಶಾಖಾ ಸದರ್ನ್ ಇಂಡಿಯ ರಿಜನಲ್ ಕೌನ್ಸಿಲ್ ಆಫ್ ಐಸಿಎಐ ನಂ. 16/0, ಮಿಲ್ಲೆರ್ಸ್ ಟ್ಯಾಂಕ್ ಬೆಡ್ ಏರಿಯಾ ಬೆಂಗಳೂರು-52 (ಅಂಬೇಡ್ಕರ ಭವನದ ಹತ್ತಿರ) ಸಭಾಂಗಣದಲ್ಲಿ ವ್ಯವಸ್ಥೆ ಮಾಡಲಾಗಿದೆ ತರಬೇತಿಯಲ್ಲಿ ಭಾಗವಹಿಸಿದವರ ಹೆಸರನ್ನು ಚಾರ್ಟ್‌ಡ್ ಅಕೌಂಟೆಂಟ್‌ರ ಪಟ್ಟಿಯಲ್ಲಿ ಸೇರಿಸಲಾಗುವುದು.

**ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ :** ರಾಜ್ಯದ ಸೌಹಾರ್ದ ಸಹಕಾರಿಗಳ ಪಟ್ಟಿಯಲ್ಲಿದ್ದು ಕಾರ್ಯನಿರ್ವಹಿಸದೇ ಇರುವ ಹಾಗೂ ಸಂಯುಕ್ತ ಸಹಕಾರಿಗೆ ಯಾವುದೇ ಮಾಹಿತಿ ನೀಡದಿರುವ ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆಯನ್ನು ನಡೆಸಲಾಗುತ್ತಿದೆ. ಈಗಾಗಲೇ 209 ಸೌಹಾರ್ದ ಸಹಕಾರಿಗಳ ಪರಿವೀಕ್ಷಣೆ ನಡೆಸಲಾಗಿದೆ.

## ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ




ಶ್ರೀಕಾಂತ ಬರುವೆ
ಕಾನೂನು ವಿಭಾಗ ಸಂಯುಕ್ತ ಸಹಕಾರಿ

**Question NO: 2) Dividend**

i) Dividend is to be paid on shares, but if during the year new shares have been purchased by the existing share holder, whether that additional share are also entitled the dividend for the year.

ii) New share holders added during the year whether they are entitled for dividend

iii) If yes what is the formula for calculation of dividend payable to such shares/ shareholders who are entered during the year with less than 1 year holding

iv) What if a share holders surrenders his / her share in between the year end.

**Answer :**

i) Yes, Dividend has to be paid to new shares issued to existing share holder during the year. If any specific provisions, constrains in their respective byelaw related to payment of dividend to additional share holders then provisions of the bylaw will prevail.

ii) Yes, Dividend has to be paid to new share holder. If any specific provisions, constrains in their respective bylaw related to give dividend to newly joined member then provision of the bylaw will prevail.

iii) If there is specific provision in their respective bye law related to calculation of dividend payable to shares/ shareholders who are entered during the year with less than 1 year then they can remain with those provisions. If there is no provisions in their respective byelaw you can follow below mentioned formula;

The days he/she is holding the shares
365 days (* dividend percentage)

iv) If a share holders surrenders his / her share in between the year end. The purpose of payment of dividend you can follow below mentioned formula:

The days he/she is holding the shares
365 days (* dividend percentage)

**Question NO: 3) Election presiding officer**

i) Election for Souharda who is presiding officer

ii) What is the procedure and what are the duties and responsibility, rights, remuneration of such officer

**Answer :**

i) Concerned Co-Operative registrar will appoint the presiding officer for election of cooperative

ii) Procedure related to election has been prescribed in detail Rule 5 of Souharda Sahakari Rules, 2004 (See Rule 5 of souharda Sahakari Rules, 2004)

## ನಿಮ್ಮ ಸಹಕಾರಿಯ ಮುಂಗಡ ಪತ್ರ ತಯಾರಿಸಲು ಕ್ರಮವಿಡಿ

ಮಾರ್ಚ್ ತಿಂಗಳು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಮುಂಗಡ ಪತ್ರ ಮಂಡಿಸುವ ಸಮಯ. ಸಹಕಾರ ಕ್ಷೇತ್ರದಲ್ಲಿಯೂ ಮುಂಗಡ ಪತ್ರ ಮಾರ್ಚ್ ತಿಂಗಳಲ್ಲಿ ಸಿದ್ಧಪಡಿಸಿ ಆಡಳಿತ ಮಂಡಳಿಯ ಅನುಮೋದನೆ ಪಡೆಯುವ ಸಾಮಾನ್ಯ ಸಭೆಯ ಅನುಮೋದನೆಗಾಗಿ ಶಿಫಾರಸು ಮಾಡುವ ಸಿದ್ಧತೆ ಇದೇ ಮಾರ್ಚ್ ತಿಂಗಳಲ್ಲಿ ನಡೆಯಬೇಕು.

ಸಂಯುಕ್ತ ಸಹಕಾರಿಯ ಅನೇಕ ತರಬೇತಿ ಕಾರ್ಯಕ್ರಮಗಳಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಗಳಲ್ಲಿ ಅವಲೋಕನಾ ಸಭೆಗಳಲ್ಲಿ ಈ ಬಗ್ಗೆ ತಿಳುವಳಿಕೆ ನೀಡಲಾಗಿದೆ. ಪರಿಣಾಮವಾಗಿ ರಾಜ್ಯದ ಅನೇಕ ಸೌಹಾರ್ದ ಸಹಕಾರಿಗಳು ಮುಂಗಡಪತ್ರವನ್ನು ಮಾರ್ಚ್ ತಿಂಗಳಲ್ಲಿ ಸಿದ್ಧಪಡಿಸಿ ಅದರಂತೆ ಕಾರ್ಯನಿರ್ವಹಿಸಿ ಸಹಕಾರಿಯ ಪ್ರಗತಿಗೆ ಕಾರಣರಾಗಿದ್ದಾರೆ ಇದೇ ರೀತಿ ಎಲ್ಲ ಸೌಹಾರ್ದ ಸಹಕಾರಿಗಳು ಕಾರ್ಯನಿರತರಾಗುವುದು ಅವಶ್ಯಕವೆಂದು ಭಾವಿಸಿದೆ.

ಮುಂಗಡಪತ್ರವನ್ನು ವೈಜ್ಞಾನಿಕವಾಗಿ ಸಿದ್ಧಪಡಿಸಬೇಕು. ವ್ಯಾಪ್ತಿಯ ಎಲ್ಲ ಸಂಪನ್ಮೂಲಗಳ ಮಾಹಿತಿ ಸಂಗ್ರಹವಾಗಬೇಕು. ಸಹಕಾರಿಯ ಮುಂದಿನ ವರ್ಷದ ಯೋಜನೆಯನ್ನು ಸಿದ್ಧಪಡಿಸಿ ಅದಕ್ಕೆ ಬೇಕಾಗುವ ಸಂಪನ್ಮೂಲಗಳ ಸಂಗ್ರಹಕ್ಕೆ ಕ್ರಮಗಳು, ಸಾಲಗಳ ವಸೂಲಾತಿಗೆ ಕ್ರಮಗಳು, ನಿಧಿಗಳ ಲಾಭದಾಯಕ ಹೂಡಿಕೆ ಕ್ರಮ, ನಿವೇಶನ ಹಾಗೂ ಕಟ್ಟಡಗಳ ವೆಚ್ಚಗಳು, ಯಂತ್ರೋಪಕರಣಗಳ ಅಳವಡಿಕೆಗೆ ಕ್ರಮ, ಹಿಂದಿನ ಸಾಲನ ವೆಚ್ಚಗಳು, ಕಡಿತ ಮಾಡಬಹುದಾದ ವೆಚ್ಚಗಳು, ಹೆಚ್ಚುವರಿ ಸಿಬ್ಬಂದಿ ನೇಮಕಾತಿಯ ಅಗತ್ಯತೆ ಅದಕ್ಕೆ ಆಗಬಹುದಾದ ವೆಚ್ಚಗಳು ಇತ್ಯಾದಿ ವಿವರಗಳನ್ನು ಆಡಳಿತ ಮಂಡಳಿ ಯವರೂಡನೆ ಹಾಗೂ ಆರ್ಥಿಕ ತಜ್ಞರೂಡನೆ ಚರ್ಚಿಸಿ ಬಜ್ಜೆಟ್ ತಯಾರಿಸಿದಲ್ಲಿ ನಿಮ್ಮ ಸಂಸ್ಥೆಗಳ ಹಣಕಾಸಿನ ನಿರ್ವಹಣೆ ಉತ್ತಮವಾಗುತ್ತದೆ. ಸೌಹಾರ್ದ ಸಹಕಾರಿಗಳು ಉಳಿದ ಸಹಕಾರಿ ಸಂಸ್ಥೆಗಳಿಗೆ ಮಾದರಿ ಹಾಗು ಅನುಕರಣೀಯವಾಗಿತ್ತವೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳು ಕಾರ್ಯನಿರತರಾಗಬೇಕೆಂಬುದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.


## SWABHIMANI SAHAKRI Form IV
## (See Rule-8)

| | | |
|---|---|---|
| 1. Place of Publication | : | Bangalore, Karnataka |
| 2. Periodically of its Publication | : | Monthly |
| 3. Printer's Name | : | Varna Communications, No.54, 1st Floor, W.A.T. Street Basavangudi, Banglaore 560 004. Karnataka. |
| Whether Citizen of India | : | Yes |
| If foreigner, State the Country of Origin Address | | |
| 4. Editor's Name | : | SHARANAGOUDA G. PATIL |
| Whether Citizen of India | : | Yes |
| If foreigner, State the Country of Origin Address | | |
| 5. Name and Address of individuals who Own the Newspaper and partners Or share holders holding more than Percent of the total capital | : | Karnataka State Souharda Federal Co-operative Ltd., Nirman Bhavan Dr. Rajkumar Road, 1st Block, Rajinagar, Bangalore-10 |

I, Sharanagouda G. Patil hereby declare that the particulars given above are true to the best of my knowledge and belief.

Bangalore.
Date: 1st March 2012.

**Sharanagouda G. Patil**
Signature of the Publisher / Editor

# ಬಪ್ಪನಾಡು ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಕಚೇರಿ ಉದ್ಘಾಟನೆ



ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರರವರು ದಕ್ಷಿಣ ಕನ್ನಡ ಜಿಲ್ಲೆಯ ಬಪ್ಪನಾಡು ವಿವಿಧೋದ್ದೇಶ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ನೆರವೇರಿಸಿ ಸಂಸ್ಥೆಗೆ ಶುಭ ಕೋರಿ ಸಹಕಾರಿ ಕ್ಷೇತ್ರದ ಮೂಲಕ ಜನಸಾಮಾನ್ಯರಿಗೆ ಪ್ರಯೋಜನವಾಗುವಂತಹ ಸಾಕಷ್ಟು ಕಾರ್ಯಗಳನ್ನು ಮಾಡಬಹುದಾಗಿದೆ. ಸಹಕಾರಿಯ ನೇತೃತ್ವ ವಹಿಸಿರುವ ನಿರ್ದೇಶಕ ಮಂಡಳಿಯವರು ಕ್ರೀಯಾಶೀಲರಾಗಿ ಕಾರ್ಯನಿರ್ವಹಿಸಲು ಕರೆ ನೀಡಿದರು. ಸದಸ್ಯರನ್ನು ನಿರಂತರ ಜಾಗೃತರನ್ನಾಗಿಸುವಂತಹ ಚಟುವಟಿಕೆಗಳನ್ನು ಸಹಕಾರಿಯು ಹಮ್ಮಿಕೊಳ್ಳಬೇಕೆಂದು ತಿಳಿಸುತ್ತ ಈ ನಿಟ್ಟಿನಲ್ಲಿ ಸಂಯುಕ್ತ ಸಹಕಾರಿಯು ಸಹಕಾರಿಗೆ ಅಗತ್ಯವಾಗುವ ಮಾರ್ಗದರ್ಶನ ನೀಡುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿಯವರು ಅನೇಕ ಸದಸ್ಯರು ಭಾಗವಹಿಸಿದ್ದರು.



**ಕ್ಯಾಲೆಂಡರ್ ಬಿಡುಗಡೆ:** ಪಾವಗಡ ಪತ್ತಿನ ಸೌಹಾರ್ದ ಸಹಕಾರಿಯ 2012ರ ಕ್ಯಾಲೆಂಡರನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರವರು ಬಿಡುಗಡೆಮಾಡಿದ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕರುಗಳಾದ ಶ್ರೀ ಬಿ.ಹೆಚ್.ಕೃಷ್ಣಾರೆಡ್ಡಿ, ಶ್ರೀ ಅರುಣ ಶಾಪುರ (ಎಮ್.ಎಲ್.ಸಿ) ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ, ಶ್ರೀಮತಿ ಮಂಜುಳಾಪಾಟೀಲ, ಶ್ರೀಮತಿ ನಾಗರತ್ನ, ಶ್ರೀ ರವಿ ಯಲಿಗಾರ, ಶ್ರೀ ಸಾಗರ ಚವಜ ಮುಂತಾದವರಿದ್ದಾರೆ.




**ಸಹಕಾರಿಯ ಮೃತಸದಸ್ಯರ ನಾಮಿನಿಗೆ ವಿಮೆ ಚೆಕ್ ವಿತರಣೆ** : ಉತ್ತರ ಕನ್ನಡ ಜಿಲ್ಲೆಯ ಬಳಲೆಯ ಸುಜಾತಾ ಸೌಹಾರ್ದ ಪತ್ತಿನ ಸಹಕಾರಿಯ ಮೃತ ಸದಸ್ಯ ಪ್ರದೀಪ ಮಧುಕರ ಅಗಸಾಲಿ ಯಿವರು ದೈವಾಧೀನರಾಗಿದ್ದರಿಂದ ಅವರ ಪತ್ನಿ (ನಾಮಿನಿ) ಶ್ರೀಮತಿ ಭಾವನಾರವರಿಗೆ ನೀಡಲಾಯಿತು. ಸಹಕಾರಿಯ ಪ್ರತಿಯೊಬ್ಬ ಸದಸ್ಯರನ್ನು ವಿಮೆಸೌಲಭ್ಯಕ್ಕೆ ಒಳಪಡಿಸಿರುವುದು ಈ ರೀತಿಯ ಅನು ಕೂಲಗಳನ್ನು ಪಡೆಯಲು ಸಾಧ್ಯವಾಗಿದೆ ಎಂದು ಸಹಕಾರಿಯ ಪ್ರಕಟಣೆ ತಿಳಿಸಿದೆ.

**ಸಂಯುಕ್ತ ಸಹಕಾರಿಯ ಪದಾಧಿಕಾರಿಗಳ ಭೇಟಿ :** ನಬಾರ್ಡ್ ಯೋಜನೆಗಳನ್ನು ಸೌಹಾರ್ದ ಸಹಕಾರಿಗಳ ಮೂಲಕ ಅನುಷ್ಠಾನಕ್ಕಾಗಿ ಮುಖ್ಯ ಪ್ರಧಾನ ವ್ಯವಸ್ಥಾಪಕ ಶ್ರೀ ಎಸ್.ಎನ್.ಎ. ಜಿನ್ನಾರವರೊಂದಿಗೆ ಸಂಯುಕ್ತ ಸಹಕಾರಿಯ ಪದಾಧಿಕಾರಿಗಳನ್ನು ಭೇಟಿ ಮಾಡಿದರು.

ನಬಾರ್ಡ್ ಸಂಸ್ಥೆಯಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಮೂಲಕ ಜಾರಿಗೆ ಕೊಡಬಹುದಾದ ಯೋಜನೆಗಳ ಬಗ್ಗೆ ಸಂಯುಕ್ತ ಸಹಕಾರಿ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರ, ಉಪಾಧ್ಯಕ್ಷರಾದಶ್ರೀ ಗುರುನಾಥ ಜ್ಯಾಂತಿಕರ್, ನಿರ್ದೇಶಕರಾದ ಶ್ರೀ ಭಾಸ್ಕರ್ ಹೆಗಡೆ ಕಾಗೇರಿ, ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ.ಪಾಟೀಲರವರು ಚರ್ಚಿಸಿದರು ಚರ್ಚೆಯ ಸಮಯದಲ್ಲಿ ನಬಾರ್ಡ್ ಪ್ರಧಾನ ವ್ಯವಸ್ಥಾಪಕ ಶ್ರೀ ಭರತಕುಮಾರ್, ಉತ್ತರಕನ್ನಡ ಜಿಲ್ಲೆಯ ಯುವ ಸಹಕಾರಿ ಶ್ರೀ ಮಂಜುನಾಥ ಹೆಗಡೆಯವರು ಉಪಸ್ಥಿತರಿದ್ದರು.

ಸಂಯುಕ್ತ ಸಹಕಾರಿಯ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳನ್ನು ಅಧ್ಯಯನ ಮಾಡಿ ಎಪ್ರಿಲ್ 2012 ರಿಂದ ಮುಂದಿನ ಕ್ರಮವಿಡುವುದಾಗಿ ಶ್ರೀ ಜಿನ್ನಾರವರು ತಿಳಿಸಿದರು.



**ವಿಶೇಷ ಆಹ್ವಾನಿತರಾಗಿ ಶ್ರೀಕಾಂತ ಹತನುರೆ** : ಬೆಳಗಾವಿ ಜಿಲ್ಲೆಯ ಶ್ರೀ ಶಂಕರಲಿಂಗ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಕೇಶ್ವರ ಹಿರಿಯ ಸಹಕಾರಿ ಶ್ರೀ ಶ್ರೀಕಾಂತ ಹತನುರೆಯವರನ್ನು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯಲ್ಲಿ ಆಹ್ವಾನಿತ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳಲಾಗಿದೆ.



ನೂತನ ನಂದನ ಸಂವತ್ಸರಕ್ಕೆ ವಿಶೇಷ ಲೇಖನ

# ಋತುಗಳ ರಾಜ ವಸಂತನ ಆಗಮನ

ಋತುಗಳ ರಾಜ ವಸಂತ ಮಾಸ ಬಂದರೆ ಯುಗಾದಿ ಹಬ್ಬ ಬಂದಂತೆ. ಯುಗಾದಿ ಹಬ್ಬ ಬಂದರೆ ಎಲ್ಲರಿಗೂ ಎಲ್ಲಿಲ್ಲದ ಸಂತೋಷ, ಸಂಭ್ರಮ ಸಡಗರ. ನಮಗೆಲ್ಲ ಹೊಸ ವರ್ಷ ಆರಂಭದ ದಿನ. ಪ್ರಕೃತಿಯಲ್ಲಿಯಾಗುವ ಬದಲಾವಣೆಗಳು ನಮ್ಮ ರೈತರ ಕೆಲಸ ಕಾರ್ಯಗಳಿಗೂ ಆಚರಣೆಗೂ ಹೆಚ್ಚು ಸಂಬಂಧವಿರುವುದು.ರೈತರು ವರುಷದ ಆರಂಭವನ್ನು ಈ ವಸಂತ ಮಾಸದಲ್ಲಿ ಮಾಡುತ್ತಾರೆ. ಪ್ರಕೃತಿಯಲ್ಲಿಯಾಗುವ ಬದಲಾವಣೆಗಳನ್ನು ಆಧರಿಸಿಯೇ ಬದುಕನ್ನು ರೂಪಿಸಿಕೊಂಡಿರುವ ನಮ್ಮ ರೈತರು ಅದನ್ನು ಇಂದಿಗೂ ಕೂಡ ಆಚರಿಸುತ್ತಾ ಬಂದಿದ್ದೇವೆ. ಮೊದಲು ಮಾನವನಿಗೆ ಹಗಲು ರಾತ್ರಿಗಳು ಬಿಟ್ಟರೆ ಏನು ತಿಳಿಯದ ಕಾಲದಲ್ಲಿ ಪ್ರಕೃತಿಯೇ ಮೊದಲ ಗುರು ತಾಯಿಯಾಗಿ ಮಾನವನನ್ನು ಉತ್ತಮ ನಾಗರಿಕನ್ನನಾಗಿಸಿದ ಹೆಗ್ಗಳಿಕೆ ತಾಯಿ ಪ್ರಕೃತಿ ಮಾತೆಗೆ ಸೇರಬೇಕು. ಇಂತಹ ತ್ಯಾಗಜೀವಿಯಾದ ಮಾತೆಯ ಉತ್ಸವದ ಹಬ್ಬವೇ ಯುಗಾದಿ.

ಯುಗಾದಿ ಹಬ್ಬವು ವರುಷದ ಆದಿಯಾಗಿದ್ದು, ನಮ್ಮಲ್ಲಿ ಉತ್ತಮವಾದ ಮಾನವೀಯ ಸಂಬಂಧಗಳನ್ನು ರೂಪಿಸುವಂತಾ ಮಹತ್ತರ ಹಬ್ಬವಾಗಿದೆ. ಸಿಹಿ-ಕಹಿ ಎರಡು ಕೂಡ ಜೀವನದಲ್ಲಿಸಮವಾಗಿರಲಿ, ಕಹಿಯನ್ನು ಮರೆತು ಸಿಹಿಯನ್ನು ಎಲ್ಲರೊಂದಿಗೆ ನಗುತ್ತಾ ಹಂಚಿಕೊಳ್ಳಬೇಕು.



**ಕಹಿಯನೆಲ್ಲ ಮರೆಯಬೇಕಯ್ಯ**
**ಅದ ಮರೆಯುವುದಕೆ ಮರೆವು ಬೇಕಯ್ಯ,**
**ಮರೆಯೂ ಮರವು ಇಲ್ಲದಿದ್ದರೆ**
**ಮನಸೇ ಕುಡಿದ ಮಂಗನಂಥಯ್ಯ,**



ಎಂದು ಪ್ರಾಥಮಿಕ ಶಾಲೆಯಲ್ಲಿ ಓದಿದ ನೆನಪು. ಇದು ಅಕ್ಷರಸಹ ನಿಜ ಕೂಡ. ಇಂತಹ ಒಳ್ಳೆಯ ಗುಣಗಳನ್ನು ಅಳವಡಿಸಿಕೊಳ್ಳಲು ಯುಗಾದಿ ಹಬ್ಬದಂತಹ ಹಬ್ಬಗಳ, ಉತ್ಸವಗಳ ಅವಶ್ಯಕತೆ ನಮ್ಮ ಈಗಿನ ಸಮಾಜಕ್ಕೆ ಇದೆ. ಹಾಗಾಗಿ ನಮ್ಮ ಮನೆಗಳಲ್ಲಿ ಹಬ್ಬ ಹರಿದಿನಗಳ ಆಚರಣೆ ಅತ್ಯವಶ್ಯಕವಾಗಿದೆ. ನಮ್ಮ ಹಳ್ಳಿಕಡೆ ಒಂದು ಗಾದೆಯನ್ನು ಹೇಳುತ್ತಾರೆ. 'ಉಂಡದ್ದೇ ಯುಗಾದಿ ಮಿಂದದ್ದೇ ದೀಪಾವಳಿ' ಎಂಬ ಅನುಭವಿಗಳು ಹೇಳದೇ, ಕೇಳದೇ ಇರುವವರು ಯಾರು?ಇಲ್ಲ. ಸಂಕ್ರಾಂತಿಯು ಎಳ್ಳು ಬೆಲ್ಲಕ್ಕೆ ಆದ್ಯತೆ ನೀಡಿದರೆ ಯುಗಾದಿಯೆಂದು ಬೇವು ಬೆಲ್ಲ ಹಂಚುವುದರ ಜೊತೆಗೆ ವಸಂತನನ್ನು ಆದರದಿಂದ ಬರ ಮಾಡಿಕೊಂಡು ಭೂಮಾತೆಯು ಕರುಣಿಸಿದ ಫಲವನ್ನು ರೈತರು ಸಂತೋಷದಿಂದ ಸಂಭ್ರಮದಿಂದ ಈ ಹಬ್ಬವನ್ನು ಆಚರಿಸುತ್ತಾರೆ. ಹಬ್ಬದ ಆಚರಣೆಯು ನಮ್ಮ ಪೂರ್ವಿಕರು ಯುಗಾದಿ ಹಬ್ಬದ ದಿನವನ್ನು ಮಂಗಳ ಸ್ನಾನವನ್ನು ಮಾಡಿ ಹೊಸ ಉಡುಪುಗಳನ್ನು ಧರಿಸಿ, ಗುರುಹಿರಿಗೆ ವಂದಿಸಿ



ಅವರಿಂದ ಆಶೀರ್ವಾದವನ್ನು ಪಡೆದು ಬೇವು ಬೆಲ್ಲವನ್ನು ಸ್ವೀಕರಿಸಿ ಜೀವನದ ಸಿಹಿ–ಕಹಿಗಳ ಸುಖ–ದುಃಖಗಳ ಸಮನಾಗಿ ಸ್ವೀಕರಿಸಿ ಸಮರಸದಿಂದಿರಬೇಕು ಎಂಬುದೇ ಈ ಹಬ್ಬದ ತಾತ್ಪರ್ಯ. ಸರಸ – ವಿರಸ ಇಲ್ಲದೇಇರುವ ಜೀವನ ನೀರಸ. ಯುಗಾದಿಯಿಂದ ಜೀವನದಲ್ಲಿ ಸಿಹಿ ಕಹಿ ಎರಡು ಸಹ ಸಮವಾಗಿ ಸ್ವೀಕರಿಸುವುದೇ ಒಂದು ಮಹತ್ತರ ಪಾಠವಾಗುತ್ತದೆ.

ಆಯುರ್ವೇದದ ಪ್ರಕಾರ ಬೇವಿನ ಮರದ ಎಲ್ಲಾ ಅಂಶಗಳು ತನ್ನ ಮೈತುಂಬ ಆರೋಗ್ಯದಾಯಕವಾದ ಗುಣಗಳನ್ನು ಹೊಂದಿರ ಅಂಶ ಎಲ್ಲರಿಗೂ ತಿಳಿದಿರುವ ವಿಷಯ. ಹಾಗೇಯೇ ಬೆಲ್ಲವು ಕೂಡ ಶ್ರೇಷ್ಠವಾದ ಪ್ರಸಾದವು ಹೌದು, ಆಯುರ್ವೇದದ ಯಾವುದೇ ಔಷಧಿ ಸ್ವೀಕರಿಸುವಾಗಲು ನಾವು ಉಪಯೋಗಿಸುತ್ತೇವೆ. ಮತ್ತು ಬೆಲ್ಲವು ದಶದಾನಗಳಲ್ಲಿ ಬೆಲ್ಲವು ಒಂದು ಬೆಲ್ಲ ಮೃತ್ಯುಂಜಯ ಸ್ವರೂಪಿ. ಆದರೆ ಸಿಹಿ ಕಹಿಗಳ ಅರ್ಥವೇ ತಿಳಿಯದ ನಮ್ಮ ಆಧುನಿಕ ಬದುಕು ನಾಳಿನ ಜನಾಂಗಕ್ಕೆ ಯುಗಾದಿಯೊಂದೇಯಲ್ಲ ಎಲ್ಲ ಹಬ್ಬಗಳ ಪರಿಚಯವನ್ನು ಮಾಡುವುದು ನಾವು ಹಬ್ಬಗಳನ್ನು ಕಡ್ಡಾಯವಾಗಿ ನಮ್ಮ ನಮ್ಮ ಮನೆಗಳಲ್ಲಿ ಆಚರಿಸುವುದು ಇಂದಿನ ದಿನಗಳಿಗೆ ಅತ್ಯವಶ್ಯಕ.

ಪ್ರಕೃತಿಯಿಂದ ನಮಗೆ ಹಬ್ಬಗಳ ಅರಿವಿನಿಂದ ಎಲ್ಲ ಉಪಯೋಗಗಳನ್ನು ಪಡೆಯುತ್ತಾ ಪ್ರಕೃತಿಯ ಆಧಾರದ, ಆಶ್ರಯವನ್ನು ಪಡೆದಿರುವ ನಾವು ಯುಗಾದಿ ಹಬ್ಬದಿಂದು ಹೊಸಜನ್ಮ, ನವಚೈತನ್ಯ, ಎಲ್ಲ ಹೊಸತು ಕಾಣುವ ನಾವು ಪ್ರಕೃತಿಯನ್ನು  ಪೂಜಿಸೋಣ, ಪರಿಸರದ ರಕ್ಷಣೆಗೆ ಇಂದೇ ಅಲ್ಲ ಈಗಲೇ ಕಂಕಣ ಬದ್ಧರಾಗೋಣ.

ಹೊಸ ವರುಷಕೆ ಹೊಸ ಹರುಷವ ಎಲ್ಲರ ಜೀವನದಲ್ಲಿ ತರಲೆಂದು ದೇವರಲ್ಲಿ ಪ್ರಾರ್ಥಿಸೋಣ.

## ಹೋಳಿಯ ಹುಣ್ಣಿಮೆ : ಬಂದಿತು ಬಣ್ಣದ ರಂಗನು ತಂದಿತು

ಶಿಶಿರ ಋತುವಿನ ಫಾಲ್ಗುಣ ಶುಕ್ಲ ಪೌರ್ಣಮಿಯಂದು ಬರುವ ಕೋಮು ಸೌಹಾರ್ದತೆಯ ಸಂಕೇತವಾಗಿರುವ ರಂಗುರಂಗಿನ ಹೋಳಿ ಹಬ್ಬವನ್ನು ಎಲ್ಲೆಡೆ ಅತ್ಯಂತ ಸಂಭ್ರಮದಿಂದ ಆಚರಿಲಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ಈ ಹಬ್ಬವನ್ನು ವಿಶಿಷ್ಟವಾಗಿ ಆಚರಿಸಲಾಗುತ್ತದೆ. ಎಲ್ಲರೂ ಬಣ್ಣ ಎರಚಿ ಸಂತೋಷ ಪಡುತ್ತಾರೆ. ಬಣ್ಣಗಳು ಎಲ್ಲೆಡೆ ಚೆಲ್ಲಾಡುತ್ತಲೇ ಖುಷಿಯನ್ನು ಹರಡುತ್ತವೆ.

ಹೋಳಿ ಹಬ್ಬದ ಬೆಳಗಿನ ಜಾವ ಕುಳ್ಳು ಕಟ್ಟಿಗೆಗಳಿಂದ ಕಾಮಣ್ಣನ ಪ್ರತಿಕೃತಿಯನ್ನು ಸುಡುವ ಮೂಲಕ ನಮ್ಮಲ್ಲಿಯ ಕಾಮವನ್ನು ಕೂಡ ದಹಿಸುತ್ತದೆ ಎಂಬ ನಂಬಿಕೆಯಿದೆ. ಬೆಳಗಾಗುತ್ತಿದ್ದಂತೆ ಪಿಚಕಾರಿಯಲ್ಲಿ ತುಂಬಿದ ಬಣ್ಣ ಒಲವನ್ನು ಸ್ನೇಹಿತರ, ಸಂಬಂಧಿಗಳ ಮೈಮೇಲೆ ಎರಚುವ ಮೂಲಕ ಸಂತಸದ ಹೊಳೆಯನ್ನು ಹರಿಸುತ್ತಾರೆ.

ಚಿಣ್ಣರಿಗಂತೂ ಬಣ್ಣದಾಟವಾಡುವುದು ಇಡೀ ಜಗತ್ತನ್ನೇ ಮರೆಯುವಂತೆ ಮಾಡುತ್ತದೆ. ರಂಗುರಂಗಾದ ಮೊಗ ಇನ್ನೊಬ್ಬರ ಗುರುತಿಗೆ ಕೂಡ ಸಿಕ್ಕುವುದಿಲ್ಲ. ಹುಬ್ಬಳ್ಳಿಯಲ್ಲಿ ರಂಗಿನಾಟವನ್ನು ಐದು ದಿನ ಆಚರಿಸಲಾಗುತ್ತದೆ. ಅದಕ್ಕೇ ರಂಗಪಂಚಮಿ ಅಂತಲೂ ಕರೆಯುತ್ತಾರೆ. ಬಣ್ಣ ಆಡದವರನ್ನು ಹೇಡಿ ಅಂತಲೂ ಅಲ್ಲಿ ಬಣ್ಣಿಸುತ್ತಾರೆ. ತಾಯಂದಿರು ರುಚಿಕಟ್ಟಾದ ಹೋಳಿಗೆ ಮಾಡಿ ಮನೆಮಂದಿಗೆಲ್ಲ ಬಡಿಸುತ್ತಾಳೆ.



ಕೋಮುಸೌಹಾರ್ದತೆಯ ಸಂಕೇತ – ಈ ಹಬ್ಬದಲ್ಲಿ ಹಿಂದೂಗಳು ಮಾತ್ರವಲ್ಲ ಮುಸ್ಲೀಮರು ಕೂಡ ಅತ್ಯಂತ ಸಂತಸದಿಂದ ಆಚರಣೆಯಲ್ಲಿ ಪಾಲ್ಗೊಳ್ಳುತ್ತಾರೆ.